# ಐತರೇಯೋಪನ್ಯಾಸಮಂಜರಿ

ಪ್ರಕಾಶಕರು:
ಅಧ್ಯಾತ್ಮಪ್ರಕಾಶಕಾರ್ಯಾಲಯ,
ಹೊಳೆನರಸೀಪುರ - ೫೭೩೨೧೧

**ಅಧ್ಯಾತ್ಮಗ್ರಂಥಾವಳಿ**

# ಐತರೇಯೋಪನ್ಯಾಸಮಂಜರಿ

(ಐತರೇಯೋಪನಿಷತ್ತಿನ ಶಾಂಕರಭಾಷ್ಯಾನುವಾದ ಸಾರಸಂಗ್ರಹ)

ಬರೆದವರು :
ಅಧ್ಯಾತ್ಮವಿದ್ಯಾಪ್ರವೀಣ, ವೇದವಿದ್ಯಾಭೂಷಣ
**ಹೆಚ್. ಎಸ್. ಲಕ್ಷ್ಮೀನರಸಿಂಹಮೂರ್ತಿ**

**ಕ್ರಮಾಂಕ ೨೧೬**

ಪ್ರಕಾಶಕರು:
ಅಧ್ಯಾತ್ಮಪ್ರಕಾಶಕಾರ್ಯಾಲಯ,
ಹೊಳೆನರಸೀಪುರ - ೫೭೩೨೧೧
೨೦೦೦

**ಐತರೇಯೋಪನ್ಯಾಸಮಂಜರಿ**

ಮೊದಲನೆಯ ಮುದ್ರಣ 2000 (2000 ಪ್ರತಿಗಳು)

ಇದರ ಹಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶಕಾರ್ಯಾಲಯದವು

All Rights Reserved

ಅಕ್ಷರ ಜೋಡಣೆ :

**ಪ್ರಶಾಂತ್ ಎಂಟರ್‌ಪ್ರೈಸಸ್**

ನಂ. ೨೧೩, ಬಾಲಾಜಿ ರಸ್ತೆ,

ತ್ಯಾಗರಾಜನಗರ, ಬೆಂಗಳೂರು - ೨೮

ದೂರವಾಣಿ : ೬೭೬೭೦೧೬

ಮುದ್ರಕರು :

**ಪ್ರಾಜ್ಞ ಪ್ರಿಂಟರ್ಸ್**

೨೨೨, ಗೌಡನಪಾಳ್ಯ ಮುಖ್ಯರಸ್ತೆ

ಬೆಂಗಳೂರು -೫೬೦ ೦೬೧

ದೂರವಾಣಿ : ೬೬೬೨೨೩೨

# ಮುನ್ನುಡಿ

ಉಪನಿಷತ್ತುಗಳಿಗೆ ಶಾಂಕರಭಾಷ್ಯಾನುಸಾರವಾಗಿ ಸರಳವಾದ ಅಭಿಪ್ರಾಯವನ್ನು ಪೂರ್ವಪಕ್ಷ-ಸಿದ್ಧಾಂತಗಳ ಗಡಿಬಿಡಿಯಿಲ್ಲದೆ ಮನನಮಾಡಲು ಇಚ್ಛಿಸುವ ವಾಚಕರ ಅನುಕೂಲಕ್ಕಾಗಿ ಪೂಜ್ಯ ಬ್ರಹ್ಮೀಭೂತ ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀ ಮಹಾಸ್ವಾಮಿಗಳು **ಮಂಜರಿ** ಗಳೆಂಬ ಹೆಸರಿನಿಂದ ಒಂದು ಗ್ರಂಥಮಾಲೆಯನ್ನು ಪ್ರಾರಂಭಿಸಿ ದಶೋಪನಿಷತ್ತುಗಳಲ್ಲಿ ಆರು ಉಪನಿಷತ್ತುಗಳಿಗೆ ಮಂಜರಿಗಳನ್ನು ಬರೆದು ವಾಚಕರಿಗೆ ಸಮರ್ಪಿಸಿದ್ದರು. ಈ ಗ್ರಂಥಮಾಲೆಯಲ್ಲಿ ಉಳಿದಿದ್ದ (೧) ಬೃಹದಾರಣ್ಯಕ (೨) ಛಾಂದೋಗ್ಯ (೩) ತೈತ್ತಿರೀಯ (೪) ಐತರೇಯ - ಈ ಉಪನಿಷತ್ತುಗಳಿಗೆ ಮಂಜರಿ ಗಳನ್ನು ಕಾರ್ಯಾಲಯದ ಪಂಡಿತರಾದ **ವೇ|| ಬ್ರ|| ಶ್ರೀ|| ಲಕ್ಷ್ಮೀನರಸಿಂಹಮೂರ್ತಿ** ಗಳವರನ್ನು ಬರೆದುಕೊಡುವಂತೆ ಕೇಳಿಕೊಳ್ಳಲಾಯಿತು. ಅದರಂತೆ ಅವರು ಈವರೆಗೆ ಬೃಹದಾರಣ್ಯಕ, ಛಾಂದೋಗ್ಯ, ತೈತ್ತಿರೀಯ, ಶ್ವೇತಾಶ್ವತರ- ಉಪನಿಷತ್ತುಗಳಿಗೆ ಬರೆದಿ ರುವ ಮಂಜರಿಗಳನ್ನು ಈಗಾಗಲೇ ಪ್ರಕಟಿಸಲಾಗಿದ್ದು **ಐತರೇಯೋಪನ್ಯಾಸಮಂಜರಿ** ಯನ್ನು ಅವರಿಂದಲೇ ಬರೆಯಿಸಿ ಪ್ರಕಟಿಸಿ ಈಗ ವಾಚಕರಿಗೆ ಸಮರ್ಪಿಸುತ್ತಿದ್ದೇವೆ.

ಮುಖ್ಯವಾಗಿ **ಮಂಜರಿಗ್ರಂಥಮಾಲೆ**ಯ ಉದ್ದೇಶಕ್ಕೆ ಅನುಗುಣವಾಗಿ ಶಾಂಕರ ಭಾಷ್ಯಾನುಸಾರವಾಗಿಯೇ ವಿಷಯಗಳನ್ನು ವಿವರಿಸಲಾಗಿದೆಯಾದರೂ ಕೆಲವು ಚರ್ಚಾ ಭಾಗಗಳನ್ನು ಕೈಬಿಡಲಾಗಿದೆ. ಆದರೆ ಇದರಿಂದ ಉಪನಿಷತ್ತಿನ ತಾತ್ಪರ್ಯಗ್ರಹಣ ಹಾಗೂ ಚಿಂತನೆಗೆ ಏನೂ ಕೊರತೆಯಾಗದಂತೆ ನೋಡಿಕೊಳ್ಳಲಾಗಿದೆ. ಇದನ್ನು 1999ನೇ ಜೂನ್‌ನಿಂದ ಆಗಸ್ಟ್‌ವರೆಗೆ **ಅಧ್ಯಾತ್ಮಪ್ರಕಾಶ** ಮಾಸಪತ್ರಿಕೆಯಲ್ಲಿ ಧಾರಾವಾಹಿಯಾಗಿ ಲೇಖನಗಳ ರೂಪದಲ್ಲಿ ಪ್ರಕಟಿಸಲಾಗಿತ್ತು. ಆ ಲೇಖನಗಳನ್ನೆಲ್ಲ ಒಟ್ಟುಗೂಡಿಸಿ ಮಂಜರಿಗಳ ಮಾಲೆಯಲ್ಲಿ ಕೊನೆಯದಾಗಿ ಈ ಗ್ರಂಥವನ್ನು ಸಿದ್ಧಗೊಳಿಸಿ ಪ್ರಕಟಿಸಿ ಮಹಾಜನರಿಗೆ ಸಮರ್ಪಿಸಲಾಗಿದೆ. ಓದುಗರ ಅನುಕೂಲಕ್ಕಾಗಿ ಮಂತ್ರಗಳನ್ನು ಗ್ರಂಥದ ಮೊದಲಿನಲ್ಲಿ ಅಳವಡಿಸಲಾಗಿದೆ. ಈ ನಮ್ಮ ಸಾರಸ್ವತ ಸೇವೆಯನ್ನು ವಾಚಕರು ಸ್ವೀಕರಿಸಿ ಪ್ರೋತ್ಸಾಹಿಸುವರೆಂದು ನಂಬಿದ್ದೇವೆ.

ಬಳ್ಳಾರಿಯಲ್ಲಿ ತಾ|| 14.10.2000 ರಿಂದ 20.10.2000 ರವರೆಗೆ ನಡೆದ ವೇದಾಂತ ಸಪ್ತಾಹದ ಸಮಯದಲ್ಲಿ ಶ್ರೀಶಂಕರತತ್ತ್ವಪ್ರಚಾರ ಮತ್ತು ಸೇವಾಸಮಿತಿ (ರಿ) ಮತ್ತು ಭಕ್ತವೃಂದದವರು ಈ ಗ್ರಂಥಪ್ರಕಟನೆಗೆ ಸಹಾಯ ಮಾಡಿರುತ್ತಾರೆ. ಮೇಲ್ಕಂಡ ಧನಸಹಾಯಮಾಡಿರುವ ಭಕ್ತರೆಲ್ಲರಿಗೂ ಕೃತಜ್ಞತಾ ಪೂರ್ವಕವಾದ ವಂದನೆಗಳು.

ಈ ಗ್ರಂಥವನ್ನು ಪೂರ್ಣಗೊಳಿಸಿ ಉಪಕರಿಸಿರುವ ಅಧ್ಯಾತ್ಮವಿದ್ಯಾಪ್ರವೀಣ ಪಂಡಿತ **ವೇ|| ಬ್ರ|| ಶ್ರೀ|| ಲಕ್ಷ್ಮೀನರಸಿಂಹಮೂರ್ತಿ**ಗಳವರಿಗೂ, ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಪುಸ್ತಕವನ್ನು ಹೊರತರಲು ಸಹಾಯಮಾಡಿರುವ ಎಲ್ಲಾ ಅಧ್ಯಾತ್ಮಪ್ರೇಮಿಗಳಿಗೂ ಕಾರ್ಯಾಲಯದ ಪರವಾಗಿ ಕೃತಜ್ಞತಾಪೂರ್ವಕ ವಂದನೆಗಳನ್ನು ಸಮರ್ಪಿಸಲಾಗಿದೆ.

ತಾ|| 18.12.2000
ವಿಕ್ರಮನಾಮಸಂವತ್ಸರ,
ಮಾರ್ಗಶಿರ ಬಹುಳ ಅಷ್ಟಮಿ.

ಇತಿ
**ಪ್ರಕಾಶಕರು**
ಅ.ಪ್ರ.ಕಾ.

--------

# ಐತರೇಯೋಪನ್ಯಾಸಮಂಜರಿ

## ಗ್ರಂಥಪ್ರಕಟನೆಗೆ ಧನಸಹಾಯ ನೀಡಿರುವ ಮಹನೀಯರುಗಳು

ಶ್ರೀಯುತರುಗಳಾದ

| | | | |
|---|---|---|---|
| 1. | **ಶ್ರೀಶಂಕರತತ್ವಪ್ರಚಾರ ಮತ್ತು ಸೇವಾ ಸಮಿತಿ (ರಿ).** (ಬಳ್ಳಾರಿಯಲ್ಲಿ 14. 10. 2000 ರಿಂದ 20. 10. 2000ರವರೆಗೆ ನಡೆದ ವೇದಾಂತ ಸಪ್ತಾಹದಲ್ಲಿ ಕಾಣಿಕೆ) | ಬಳ್ಳಾರಿ | ರೂ. 1001 |
| 2. | **ಜೂಟೂರ್ ಶೇಷಾಚಲಮ್ ಬ್ರದರ್ಸ್** (ದಿ|| ಜೂಟೂರು ಅಪ್ಪಣ್ಣಪ್ಪ ಮತ್ತು ಪಾರ್ವತಮ್ಮ ಸ್ಮರಣಾರ್ಥ) | ಬಳ್ಳಾರಿ | ,, 250 |
| 3. | **ಎ.ಬಿ. ಜೋಷಿ** (ದಿ|| ಜೋಷಿ ಕಾಶೀನಾಥಭಟ್ಟ ಮತ್ತು ಸೀತಮ್ಮ ಸ್ಮರಣಾರ್ಥ) | ಬಳ್ಳಾರಿ | ,, 250 |
| 4. | **ಎಲ್. ಶ್ರೀಪಾದಭಟ್ಟ** (ದಿ|| ಲಕ್ಕೂರು ರಾಮಭಟ್ಟ ಮತ್ತು ಲಕ್ಕುಂಡಿ ಅಂಬಾಬಾಯಿ ಸ್ಮರಣಾರ್ಥ) | ಬಳ್ಳಾರಿ | ,, 250 |
| 5. | **ವೈ. ಸುರೇಶಬಾಬು** (ದಿ|| ಟಿ.ಜೆ. ಮಾಣುಕ್ಯಭಟ್ಟ ಮತ್ತು ಕೃಷ್ಣವೇಣಮ್ಮ ಸ್ಮರಣಾರ್ಥ) | ಬಳ್ಳಾರಿ | ,, 250 |
| 6. | **ಜಿ. ಜಗನ್ನಾಥಭಟ್ಟ** (ತಂದೆ ದಿ|| ಗೋಸಾವಿ ಶೀನಂಭಟ್ಟ ಮತ್ತು ತಾಯಿ ದಿ|| ಲಕ್ಷ್ಮೀದೇವಮ್ಮ ಸ್ಮರಣಾರ್ಥ) | ಬಳ್ಳಾರಿ | ,, 250 |
| 7. | **ಎ. ತಾರಾನಾಥ್** (ಬಾಲಾಜಿ ಸ್ಟುಡಿಯೊ) | ಬಳ್ಳಾರಿ | ,, 250 |
| | | ಒಟ್ಟು | 2501 |

**ಮೇಲ್ಕಂಡ ದಾನಿಗಳಿಗೆಲ್ಲ ಕಾರ್ಯಾಲಯದ ಪರವಾಗಿ ಕೃತಜ್ಞತಾಪೂರ್ವಕ ವಂದನೆಗಳು**

## ಶಾಂತಿ ಪಾಠ

ಓಂ ವಾಙ್ಮೇ ಮನಸಿ ಪ್ರತಿಷ್ಠಿತಾ ಮನೋ ಮೇ ವಾಚಿ ಪ್ರತಿಷ್ಠಿತಮ್ ।
ಆವಿರಾವೀರ್ಮ ಏಧಿ ವೇದಸ್ಯ ಮ ಆಣೀಸ್ಥಃ, ಶ್ರುತಂ ಮೇ ಮಾ ಪ್ರಹಾಸೀಃ ।
ಅನೇನಾಧೀತೇನ ಅಹೋ ರಾತ್ರಾನ್ ಸಂದಧಾಮಿ ಋತಂ ವದಿಷ್ಯಾಮಿ ಸತ್ಯಂ
ವದಿಷ್ಯಾಮಿ ತನ್ಮಾಮವತು ತದ್ವಕ್ತಾರಮವತು, ಅವತು ಮಾಮ್ ಅವತು ವಕ್ತಾರಮ್ ।
ಅವತು ವಕ್ತಾರಮ್ ॥

ಓಂ ಶಾನ್ತಿಃ ಶಾನ್ತಿಃ ಶಾನ್ತಿಃ

(ಅರ್ಥ)

ನನ್ನ ವಾಕ್ಕು ಮನಸ್ಸಿನಲ್ಲಿ ಪ್ರತಿಷ್ಠಿತವಾಗಲಿ. ನನ್ನ ಮನಸ್ಸು ವಾಕ್ಕಿನಲ್ಲಿ ಪ್ರತಿಷ್ಠಿತವಾಗಲಿ. ಹೇ ಪ್ರಕಾಶವಾದ ಬ್ರಹ್ಮವೆ ; ನನಗೆ ಪ್ರತ್ಯಕ್ಷನಾಗು. (ಹೇ ವಾಙ್ಮನಸಗಳೇ), ನನಗೆ ವೇದಾರ್ಥವನ್ನು ತಿಳಿಯಲು ಸಾಮರ್ಥ್ಯವುಂಟಾಗಲಿ. ನಾನು ಕಲಿತ ವೇದವು ನನ್ನನ್ನು ಬಿಡದಿರಲಿ. ಈ ಅಧ್ಯಯನದಿಂದ ಅಹೋರಾತ್ರಿಗಳನ್ನು ಸಂಯೋಜಿಸುತ್ತೇನೆ. ಋತವನ್ನು ಹೇಳುತ್ತೇನೆ. ಸತ್ಯವನ್ನು ಹೇಳುತ್ತೇನೆ. ಬ್ರಹ್ಮವು ನನ್ನನ್ನು ಕಾಪಾಡಲಿ. ಆಚಾರ್ಯನನ್ನು ಕಾಪಾಡಲಿ.

--------

# ಒಂದನೆಯ ಅಧ್ಯಾಯ

## ಒಂದನೆಯ ಖಂಡ

### ಲೋಕಲೋಕಪಾಲರುಗಳ ಸೃಷ್ಟಿ

ಓಮ್ ಆತ್ಮಾ ವಾ ಇದಮೇಕ ಏವಾಗ್ರ ಆಸೀತ್ ।
ನಾನ್ಯತ್ಕಿಂಚನ ಮಿಷತ್ । ಸ ಈಕ್ಷತ ಲೋಕಾನ್ನು ಸೃಜಾ ಇತಿ ॥ ೧ ॥

ಸ ಇಮಾಲ್ಲೋಕಾನಸೃಜತ । ಅಮ್ಭೋ ಮರೀಚೀರ್ಮರಮಾಪೋಽದೋಽಮ್ಭಃ ಪರೇಣ ದಿವಂ ದ್ಯೌಃ ಪ್ರತಿಷ್ಠಾಽನ್ತರಿಕ್ಷಂ ಮರೀಚಯಃ । ಪೃಥಿವೀ ಮರೋ ಯಾ ಅಧಸ್ತಾತ್ ತಾ ಆಪಃ ॥ ೨ ॥

ಸ ಈಕ್ಷತೇಮೇ ನು ಲೋಕಾ ಲೋಕಪಾಲಾನ್ನು ಸೃಜಾ ಇತಿ ।
ಸೋಽದ್ಭ್ಯ ಏವ ಪುರುಷಂ ಸಮುದ್ಧೃತ್ಯಾಮೂರ್ಛಯತ್ ॥ ೩ ॥

ತಮಭ್ಯತಪತ್ ತಸ್ಯಾಭಿತಪ್ತಸ್ಯ ಮುಖಂ ನಿರಭಿದ್ಯತ ಯಥಾಣ್ಡಮ್ । ಮುಖಾದ್ವಾಗ್ವಾಚೋಽಗ್ನಿರ್ನಾಸಿಕೇ ನಿರಭಿದ್ಯೇತಾಂ ನಾಸಿಕಾಭ್ಯಾಂ ಪ್ರಾಣಃ ಪ್ರಾಣಾದ್ವಾಯುರಕ್ಷಿಣೀ ನಿರಭಿದ್ಯೇತಾಮಕ್ಷೀಭ್ಯಾಂ ಚಕ್ಷುಶ್ಚಕ್ಷುಷ ಆದಿತ್ಯಃ ಕರ್ಣೌ ನಿರಭಿದ್ಯೇತಾಂ ಕರ್ಣಾಭ್ಯಾಂ ಶ್ರೋತ್ರಂ ಶ್ರೋತ್ರಾದ್ದಿಶಸ್ತ್ವಗ್ ನಿರಭಿದ್ಯತ ತ್ವಚೋ ಲೋಮಾನಿ ಲೋಮಭ್ಯ ಓಷಧಿವನಸ್ಪತಯೋ ಹೃದಯಂ ನಿರಭಿದ್ಯತ ಹೃದಯಾನ್ಮನೋ ಮನಸಶ್ಚನ್ದ್ರಮಾ ನಾಭಿರ್ನಿರಭಿದ್ಯತ ನಾಭ್ಯಾ ಅಪಾನೋಽ-ಪಾನಾನ್ಮೃತ್ಯುಃ ಶಿಶ್ನಂ ನಿರಭಿದ್ಯತ ಶಿಶ್ನಾದ್ರೇತೋ ರೇತಸ ಆಪಃ ॥ ೪ ॥

## ಒಂದನೆಯ ಅಧ್ಯಾಯ - ಎರಡನೆಯ ಖಂಡ

### ದೇವತೆಗಳಿಗೆ ಸಂಸಾರಬಂಧ

ತಾ ಏತಾ ದೇವತಾಃ ಸೃಷ್ಟಾ ಅಸ್ಮಿನ್ ಮಹತ್ಯರ್ಣವೇ ಪ್ರಾಪತನ್ ।
ತಮಶನಾಪಿಪಾಸಾಭ್ಯಾಮನ್ವವಾರ್ಜತ್ । ತಾ ಏನಮಬ್ರುವನ್ನಾಯತನಂ
ನಃ ಪ್ರಜಾನೀಹಿ ಯಸ್ಮಿನ್ ಪ್ರತಿಷ್ಠಿತಾ ಅನ್ನಮದಾಮೇತಿ ॥ ೧ ॥

### ದೇವತೆಗಳಿಗೆ ತಕ್ಕ ಅಧಿಷ್ಠಾನ

ತಾಭ್ಯೋ ಗಾಮಾನಯತ್ ತಾ ಅಬ್ರುವನ್ ನ ವೈ ನೋಽಯಮಲಮಿತಿ ।
ತಾಭ್ಯೋಽಶ್ವಮಾನಯತ್ ತಾ ಅಬ್ರುವನ್ ನ ವೈ ನೋಽಯಮಲಮಿತಿ ॥ ೨ ॥

ತಾಭ್ಯಃ ಪುರುಷಮಾನಯತ್ ತ ಅಬ್ರುವನ್ ಸುಕೃತಂ ಬತೇತಿ ।
ಪುರುಷೋ ವಾವ ಸುಕೃತಮ್ । ತಾ ಅಬ್ರವೀದ್ಯಥಾಯತನಂ ಪ್ರವಿಶತೇತಿ ॥ ೩ ॥

ಅಗ್ನಿರ್ವಾಗ್ಭೂತ್ವಾ ಮುಖಂ ಪ್ರಾವಿಶದ್ವಾಯುಃ ಪ್ರಾಣೋ ಭೂತ್ವಾ
ನಾಸಿಕೇ ಪ್ರಾವಿಶದಾದಿತ್ಯಶ್ಚಕ್ಷುರ್ಭೂತ್ವಾಽಕ್ಷಿಣೀ ಪ್ರಾವಿಶದ್ದಿಶಃ
ಶ್ರೋತ್ರಂ ಭೂತ್ವಾ ಕರ್ಣೌ ಪ್ರಾವಿಶನ್ನೋಷಧಿವನಸ್ಪತಯೋ
ಲೋಮಾನಿ ಭೂತ್ವಾ ತ್ವಚಂ ಪ್ರಾವಿಶಂಶ್ಚನ್ದ್ರಮಾ ಮನೋ ಭೂತ್ವಾ
ಹೃದಯಂ ಪ್ರಾವಿಶನ್ಮೃತ್ಯುರಪಾನೋ ಭೂತ್ವಾ ನಾಭಿಂ
ಪ್ರಾವಿಶದಾಪೋ ರೇತೋ ಭೂತ್ವಾ ಶಿಶ್ನಂ ಪ್ರಾವಿಶನ್ ॥ ೪॥

## ದೇವತೆಗಳಿಗೂ ಹಸಿವುಬಾಯಾರಿಕೆಗಳಿಗೂ ನಿತ್ಯಸಂಬಂಧ

ತಮಶನಾಯಾಪಿಪಾಸೇ ಅಬ್ರೂತಾಮಾವಾಭ್ಯಾಮಭಿಪ್ರಜಾನೀಹೀತಿ । ತಾ ಅಬ್ರವಿದೇತಾಸ್ವೇವ ವಾಂ ದೇವತಾಸ್ವಾಭಜಾಮ್ಯೇತಾಸು ಭಾಗಿನ್ಯೌ ಕರೋಮೀತಿ । ತಸ್ಮಾದ್ಯಸ್ಯೈ ಕಸ್ಯೈ ಚ ದೇವತಾಯೈ ಹವಿರ್ಗೃಹ್ಯತೇ ಭಾಗಿನ್ಯಾವೇವಾ-ಸ್ಯಾಮಶನಾಯಾಪಿಪಾಸೇ ಭವತಃ ॥ ೫ ॥

## ಒಂದನೆಯ ಅಧ್ಯಾಯ- ಮೂರನೆಯ ಖಂಡ

## ಅನ್ನದ ಸೃಷ್ಟಿ, ಸೃಷ್ಟಿಯಲ್ಲಿ ಆತ್ಮನ ಪ್ರವೇಶ

ಸ ಈಕ್ಷತೇಮೇ ನು ಲೋಕಾಶ್ಚ ಲೋಕಪಾಲಾಶ್ಚಾನ್ನಮೇಭ್ಯಃ ಸೃಜಾ ಇತಿ ॥ ೧ ॥

ಸೋಽಪೋಽಭ್ಯತಪತ್ ತಾಭ್ಯೋಽಭಿತಪ್ತಾಭ್ಯೋ ಮೂರ್ತಿರಜಾಯತ ।
ಯಾ ವೈ ಸಾ ಮೂರ್ತಿರಜಾಯತಾನ್ನಂ ವೈ ತತ್ ॥ ೨ ॥

ತದೇನತ್ ಸೃಷ್ಟಂ ಪರಾಙತ್ಯಜಿಘಾಂಸತ್ ತದ್ವಾಚಾಽಜಿಘೃಕ್ಷತ್ ತನ್ನಾಶಕ್ನೋದ್ವಾಚಾ ಗ್ರಹೀತುಂ ।
ಸ ಯದ್ಧೈನದ್ವಾಚಾಗ್ರಹೈಷ್ಯದಭಿವ್ಯಾಹೃತ್ಯ ಹೈವಾನ್ನಮತ್ರಪ್ಸ್ಯತ್ ॥ ೩ ॥

ತತ್ಪ್ರಾಣೇನಾಜಿಘೃಕ್ಷತ್ ತನ್ನಾಶಕ್ನೋತ್ ಪ್ರಾಣೇನ ಗ್ರಹೀತುಮ್
ಸ ಯದ್ಧೈನತ್ ಪ್ರಾಣೇನಾಗ್ರಹೈಷ್ಯದಭಿಪ್ರಾಣ್ಯ ಹೈವಾನ್ನಮತ್ರಪ್ಸ್ಯತ್ ॥ ೪ ॥

ತಚ್ಚಕ್ಷುಷಾಽಜಿಘೃಕ್ಷತ್ ತನ್ನಾಶಕ್ನೋಚ್ಚಕ್ಷುಷಾ ಗ್ರಹೀತುಮ್ ।
ಸ ಯುದ್ಧೈನಚ್ಚಕ್ಷುಷಾಽಗ್ರಹೈಷ್ಯದ್ದೃಷ್ಟ್ವಾ ಹೈವಾನ್ನಮತ್ರಪ್ಸ್ಯತ್ ॥ ೫ ॥

ತಚ್ಛ್ರೋತ್ರೇಣಾಜಿಘೃಕ್ಷತ್ ತನ್ನಾಶಕ್ನೋಚ್ಛ್ರೋತ್ರೇಣ ಗ್ರಹೀತುಮ್
ಸ ಯದ್ಧೈನ ಚ್ಛ್ರೋತ್ರೇಣಾ ಗ್ರಹೈಷ್ಯಚ್ಛ್ರುತ್ವಾ ಹೈವಾನ್ನಮತ್ರಪ್ಸ್ಯತ್ ॥ ೬ ॥

ತತ್ತ್ವಚಾಽಜಿಘೃಕ್ಷತ್ ತನ್ನಾಶಕ್ನೋತ್ತ್ವಚಾ ಗ್ರಹೀತುಮ್ ।
ಸ ಯದ್ಧೈನತ್ ತ್ವಚಾಗ್ರಹೈಷ್ಯತ್ ಸ್ಪೃಷ್ಟ್ವಾ ಹೈವಾನ್ನ ಮತ್ರಪ್ಸ್ಯತ್ ॥ ೭ ॥

ತನ್ಮನಸಾಽಜಿಘೃಕ್ಷತ್ ತನ್ನಾಶಕ್ನೋನ್ಮನಸಾ ಗ್ರಹೀತುಮ್ ।
ಸ ಯದ್ಧೈನನ್ಮನಸಾಽಗ್ರಹೈಷ್ಯದ್ಧ್ಯಾತ್ವಾ ಹೈವಾನ್ನಮತ್ರಪ್ಸ್ಯತ್ ॥ ೮ ॥

ತಚ್ಛಿಶ್ನೇನಾಜಿಘೃಕ್ಷತ್ ತನ್ನಾಶಕ್ನೋಚ್ಛಿಶ್ನೇನ ಗ್ರಹೀತುಮ್ ।
ಸ ಯದ್ಧೈನಚ್ಛಿಶ್ನೇನಾಗ್ರಹೈಷ್ಯದ್ವಿಸೃಜ್ಯ ಹೈವಾನ್ನ ಮತ್ರಪ್ಸ್ಯತ್ ॥ ೯ ॥

ತದಪಾನೇನಾಜಿಘೃಕ್ಷತ್ ತದಾವಯತ್ ।
ಸೈಷೋಽನ್ನಸ್ಯ ಗ್ರಹೋ ಯದ್ವಾಯುರನ್ನಾಯುರ್ವಾ ಏಷ ಯದ್ವಾಯುಃ ॥ ೧೦ ॥

## ಅನ್ನವನ್ನು ಹಿಡಿದುಕೊಂಡದ್ದು

ಸ ಈಕ್ಷತ ಕಥಂ ನ್ವಿದಂ ಮದೃತೇ ಸ್ಯಾದಿತಿ ।
ಸ ಈಕ್ಷತ ಕತರೇಣ ಪ್ರಪದ್ಯಾ ಇತಿ । ಸ ಈಕ್ಷತ ಯದಿ
ವಾಚಾಭಿವ್ಯಾಹೃತಂ ಯದಿ ಪ್ರಾಣೇನಾಭಿಪ್ರಾಣಿತಂ ಯದಿ
ಚಕ್ಷುಷಾ ದೃಷ್ಟಂ ಯದಿ ಶ್ರೋತ್ರೇಣ ಶ್ರುತಂ ಯದಿ
ತ್ವಚಾ ಸ್ಪೃಷ್ಟಂ ಯದಿ ಮನಸಾ ಧ್ಯಾತಂ ಯದ್ಯಪಾನೇನಾಭ್ಯಪಾನಿತಂ
ಯದಿ ಶಿಶ್ನೇನ ವಿಸೃಷ್ಟಮಥ ಕೋಽಹಮಿತಿ ॥ ೧೧ ॥

## ಆತ್ಮನು ಶರೀರವನ್ನು ಪ್ರವೇಶಿಸಿದ್ದು

ಸ ಏತಮೇವ ಸೀಮಾನಂ ವಿದಾರ್ಯೈತಯಾ ದ್ವಾರಾ ಪ್ರಾಪದ್ಯತ । ಸೈಷಾ ವಿದೃತಿರ್ನಾಮ ದ್ವಾಸ್ತದೇತನ್ನಾಂದನಮ್ । ತಸ್ಯ ತ್ರಯ ಆವಸಥಾಸ್ತ್ರಯಃ ಸ್ವಪ್ನಾಃ ।
ಅಯಮಾವಸಥೋಽಯಮಾವಸಥೋಽಯಮಾವಸಥ ಇತಿ ॥ ೧೨ ॥

## ಬ್ರಹ್ಮಸಾಕ್ಷಾತ್ಕಾರ

ಸ ಜಾತೋ ಭೂತಾನ್ಯಭಿವ್ಯೈಖ್ಯತ್ ಕಿಮಿಹಾನ್ಯಂ ವಾವದಿಷದಿತಿ ।
ಸ ಏತಮೇವ ಪುರುಷಂ ಬ್ರಹ್ಮ ತತಮಮಪಶ್ಯದಿದಮದರ್ಶಮಿತೀ೦ ೩ ॥ ೧೩ ॥

ತಸ್ಮಾದಿದನ್ದ್ರೋ ನಾಮೇದನ್ದ್ರೋ ಹ ವೈ ನಾಮ
ತಮಿದನ್ದ್ರಂ ಸನ್ತಮಿನ್ದ್ರ ಇತ್ಯಾಚಕ್ಷತೇ ಪರೋಕ್ಷೇಣ ।
ಪರೋಕ್ಷಪ್ರಿಯಾ ಇವ ಹಿ ದೇವಾಃ ॥ ೧೪ ॥

# ಎರಡನೆಯ ಅಧ್ಯಾಯ

## ಜೀವನ ಬಂಧಮೋಕ್ಷಗಳು

ಪುರುಷೇ ಹ ವಾ ಅಯಮಾದಿತೋ ಗರ್ಭೋ ಭವತಿ
ಯದೇತದ್ರೇತಃ । ತದೇತತ್ಸರ್ವೇಭ್ಯೋಽಙ್ಗೇಭ್ಯಸ್ತೇಜಃ
ಸಮ್ಭೂತಮಾತ್ಮನ್ಯೇವಾತ್ಮಾನಂ ಬಿಭರ್ತಿ ತದ್ಯದಾ ಸ್ತ್ರಿಯಾಂ
ಸಿಞ್ಚತ್ಯಥೈನಜ್ಜನಯತಿ ತದಸ್ಯ ಪ್ರಥಮಂ ಜನ್ಮ ॥೧॥

## ಪುರುಷನ ಎರಡನೆಯ ಜನ್ಮ

ತತ್ ಸ್ತ್ರಿಯಾ ಆತ್ಮಭೂಯಂ ಗಚ್ಛತಿ ಯಥಾ ಸ್ವಮಙ್ಗಂ ತಥಾ । ತಸ್ಮಾದೇನಾಂ
ನ ಹಿನಸ್ತಿ ಸಾಸ್ಯೈತಮಾತ್ಮಾನಮತ್ರ ಗತಂ ಭಾವಯತಿ ॥೨॥

ಸಾ ಭಾವಯಿತ್ರೀ ಭಾವಯಿತವ್ಯಾ ಭವತಿ । ತಂ ಸ್ತ್ರೀ ಗರ್ಭಂ ಬಿಭರ್ತಿ ಸೋಽಗ್ರ ಏವಂ ಕುಮಾರಂ ಜನ್ಮನೋಽಗ್ರೇಽಧಿಭಾವಯತಿ । ಸ ಯತ್ಕುಮಾರಂ ಜನ್ಮನೋಽಗ್ರೇಽಧಿಭಾವಯತ್ಯಾತ್ಮಾನಮೇವ ತದ್ ಭಾವಯತ್ಯೇಷಾಂ ಲೋಕಾನಾಂ ಸನ್ತತ್ಯಾ ಏವಂ ಸನ್ತತಾ ಹೀಮೇ ಲೋಕಾಸ್ತದಸ್ಯ ದ್ವಿತೀಯಂ ಜನ್ಮ ॥೩॥

## ಪುರುಷನ ಮೂರನೆಯ ಜನ್ಮ

ಸೋಽಸ್ಯಾಯಮಾತ್ಮಾ ಪುಣ್ಯೇಽಭ್ಯಃ ಕರ್ಮಭ್ಯಃ ಪ್ರತಿಧೀಯತೇ ಅಥಾಸ್ಯಾಯಮಿತರ ಆತ್ಮಾ ಕೃತಕೃತ್ಯೋ ವಯೋಗತಃ ಪ್ರೈತಿ ಸ ಇತಃ ಪ್ರಯನ್ನೇವ ಪುನರ್ಜಾಯತೇ ತದಸ್ಯ ತೃತೀಯಂ ಜನ್ಮ ॥೪॥

## ವಾಮದೇವನ ಸಾಕ್ಷಾತ್ಕಾರ

ತದುಕ್ತಮೃಷಿಣಾ-

ಗರ್ಭೇ ನು ಸನ್ನನ್ವೇಷಾಮವೇದಮಹಂ ದೇವಾನಾಂ ಜನಿಮಾನಿ
ವಿಶ್ವಾ । ಶತಂ ಮಾ ಪುರ ಆಯಸೀರರಕ್ಷನ್ ಅಧಃ ಶ್ಯೇನೋ
ಜವಸಾ ನಿರದೀಯಮಿತಿ । ಗರ್ಭ ಏವೈತಚ್ಛಯಾನೋ ವಾಮ
ದೇವ ಏವಮುವಾಚ ॥೫॥

## ವಾಮದೇವನಿಗೆ ಮುಕ್ತಿ

ಸ ಏವಂ ವಿದ್ವಾನಸ್ಮಾಚ್ಛರೀರಭೇದಾದೂರ್ಧ್ವ ಉತ್ಕ್ರಮ್ಯಾಮುಷ್ಮಿನ್ ಸ್ವರ್ಗೇ ಲೋಕೇ ಸರ್ವಾನ್ ಕಾಮಾನಾಪ್ತ್ವಾ ಅಮೃತಃ ಸಮಭವತ್ ಸಮಭವತ್ ॥೬॥

# ಮೂರನೆಯ ಅಧ್ಯಾಯ

## ಪರಬ್ರಹ್ಮಸ್ವರೂಪನಿರ್ಧಾರಣ, ಫಲೋಪಸಂಹಾರ

ಕೋಽಯಮಾತ್ಮೇತಿ ವಯಮುಪಾಸ್ಮಹೇ ಕತರಃ ಸ ಆತ್ಮಾ ।
ಯೇನ ವಾ ಪಶ್ಯತಿ[1] ಯೇ ನ ವಾ ಶೃಣೋತಿ ಯೇನ ವಾ
ಗನ್ಧಾನಾಜಿಘ್ರತಿ ಯೇನ ವಾ ವಾಚಂ ವ್ಯಾಕರೋತಿ ಯೇನ
ವಾ ಸ್ವಾದು ಚಾಸ್ವಾದು ಚ ವಿಜಾನಾತಿ ॥೧॥

## ಅರಿಯುವಾಗ ಮಾರ್ಪಡುವ ಕರಣ

ಯದೇತದ್ ಹೃದಯಂ ಮನಶ್ಚೈತತ್ । ಸಂಜ್ಞಾನಮಾಜ್ಞಾನಂ
ವಿಜ್ಞಾನಂ ಪ್ರಜ್ಞಾನಂ ಮೇಧಾ ದೃಷ್ಟಿರ್ಧೃತಿರ್ಮತಿರ್ಮನೀಷಾ
ಜೂತಿಃ ಸ್ಮೃತಿಃ ಸಙ್ಕಲ್ಪಃ ಕ್ರತುರಸುಃ ಕಾಮೋ ವಶ ಇತಿ ।
ಸರ್ವಾಣ್ಯೇವೈತಾನಿ ಪ್ರಜ್ಞಾನಸ್ಯ ನಾಮಧೇಯಾನಿ ಭವನ್ತಿ ॥೨॥

## ಎಲ್ಲರಲ್ಲಿರುವ ಪ್ರಜ್ಞಾನವೇ ಬ್ರಹ್ಮವು

ಏಷ ಬ್ರಹ್ಮೈಷ ಇನ್ದ್ರ ಏಷ ಪ್ರಜಾಪತಿರೇತೇ ಸರ್ವೇ ದೇವಾ ಇಮಾನಿ ಪಞ್ಚ ಮಹಾಭೂತಾನಿ ಪೃಥಿವೀ ವಾಯುರಾಕಾಶ ಆಪೋ ಜ್ಯೋತೀಂಷೀತ್ಯೇತಾನೀಮಾನಿ ಚ ಕ್ಷುದ್ರಮಿಶ್ರಾಣೀವ । ಬೀಜಾನೀತರಾಣಿ ಚೇತರಾಣಿ ಚಾಣ್ಡಜಾನಿ ಚ ಜಾರುಜಾನಿ ಚ ಸ್ವೇದಜಾನಿ ಚೋದ್ಭಿಜ್ಜಾನಿ ಚಾಶ್ವಾ ಗಾವಃ ಪುರುಷಾ ಹಸ್ತಿನೋ ಯತ್ಕಿಂಚೇದಂ ಪ್ರಾಣಿ ಜಙ್ಗಮಂ ಚ ಪತತ್ರಿ ಚ ಯಚ್ಚ ಸ್ಥಾವರಮ್ ಸರ್ವಂ ತತ್ ಪ್ರಜ್ಞಾನೇತ್ರಂ ಪ್ರಜ್ಞಾನೇ ಪ್ರತಿಷ್ಠಿತಂ ಪ್ರಜ್ಞಾನೇತ್ರೋ ಲೋಕಃ ಪ್ರಜ್ಞಾ ಪ್ರತಿಷ್ಠಾ ಪ್ರಜ್ಞಾನಂ ಬ್ರಹ್ಮ ॥೩॥

## ಬ್ರಹ್ಮಜ್ಞಾನಫಲದ ಉಪಸಂಹಾರ

ಸ ಏತೇನ ಪ್ರಜ್ಞೇನಾತ್ಮನಾಽಸ್ಮಾಲ್ಲೋಕಾದುತ್ಕ್ರಮ್ಯಾಮುಷ್ಮಿನ್ ಸ್ವರ್ಗೇ ಲೋಕೇ ಸರ್ವಾನ್ ಕಾಮಾನಾಪ್ತ್ವಾಽಮೃತಃ ಸಮಭವತ್ ಸಮಭವತ್ ॥೪॥

---

1. "ಯೇನ ವಾ ರೂಪಂ ಪಶ್ಯತಿ, ಯೇನ ವಾ ಶಬ್ದಂ ಶೃಣೋತಿ" ಎಂಬ ಪಾಠದಲ್ಲಿ "ರೂಪಮ್" "ಶಬ್ದಮ್" ಎಂಬ ಮಾತುಗಳು ಭಾಷ್ಯದ ಬಲದಿಂದ ಬರೆದವರು ಸೇರಿಸಿಕೊಂಡವುಗಳಂತೆ ತೋರುತ್ತದೆ.

---------

## ।। ಓಮ್ ।।

# ಐತರೇಯೋಪನ್ಯಾಸಮಂಜರಿ

## ಒಂದನೆಯ ಅಧ್ಯಾಯ

## ಜಗತ್ಸೃಷ್ಟಿ

ಐತರೇಯೋಪನಿಷತ್ತು ಋಗ್ವೇದಕ್ಕೆ ಸೇರಿರುತ್ತದೆ. ಋಗ್ವೇದದಲ್ಲಿ ಶಾಕಲಸಂಹಿತೆ, ಶಾಂಖಾಯನಸಂಹಿತೆ - ಎಂದು ಎರಡು ವಿಭಾಗಗಳಿವೆ. ಈ ಉಪನಿಷತ್ತು ಶಾಕಲಸಂಹಿತೆಯ ಮಂತ್ರಗಳನ್ನು ವಿವರಿಸುವ ಐತರೇಯಬ್ರಾಹ್ಮಣಕ್ಕೆ ಸೇರಿದ್ದು ಅಲ್ಲಿರುವ ಐತರೇಯಾರಣ್ಯಕದಲ್ಲಿ ಕಂಡುಬರುತ್ತದೆ. ಇತರಾ -ಎಂಬಾಕೆಯ ಮಗನಾದ 'ಮಹಿದಾಸ' ನೆಂಬ ಸಂಪ್ರದಾಯಪ್ರವರ್ತಕನಾದ ಋಷಿಯಿಂದ ಇದು ಹೊರಬಂದಿರುತ್ತದೆ. ಇದರಲ್ಲಿ ಆರು ಅಧ್ಯಾಯಗಳಿದ್ದು ಕಡೆಯ ಮೂರು ಅಧ್ಯಾಯಗಳಲ್ಲಿ ಆತ್ಮವಿಚಾರವಿದೆ. ಆದ್ದರಿಂದ ಶ್ರೀಶಂಕರಭಗವತ್ಪಾದರು ಈ ಭಾಗಕ್ಕೆ ತಮ್ಮ ಅಮೋಘವಾದ ಭಾಷ್ಯವನ್ನು ಅನುಗ್ರಹಿಸಿದ್ದಾರೆ. ಅದರಂತೆ ಈ ಉಪನಿಷತ್ತಿನ ಸಂದೇಶವನ್ನು ಮನನಮಾಡೋಣ.

ಆತ್ಮನು ಜಗತ್ತೆಲ್ಲವನ್ನೂ ಸೃಷ್ಟಿಮಾಡಿ ಅದರಲ್ಲಿ ಜೀವರೂಪದಿಂದ ಒಳಹೊಕ್ಕು ಸಂಸಾರಮಾಡುತ್ತಿದ್ದು ವಿಚಾರದಿಂದ ನಾನು ಚಿನ್ಮಾತ್ರಸ್ವರೂಪನು - ಎಂದು ಸಾಕ್ಷಾತ್ಕಾರಮಾಡಿಕೊಳ್ಳುತ್ತಾನೆ -ಎಂದು ಈ ಉಪನಿಷತ್ತಿನಲ್ಲಿ ವರ್ಣಿಸಿದೆ. ಇದರ ಅಭಿಪ್ರಾಯವನ್ನು ಭಾಷ್ಯಕಾರರು ಹೀಗೆ ವಿವರಿಸಿರುತ್ತಾರೆ. : ''ಆತ್ಮನೆಂದರೆ ನಮ್ಮ ಸ್ವರೂಪವೇ. ಅವನಲ್ಲಿ ಶಬ್ದಾದಿಗುಣಗಳು ಯಾವವೂ ಇಲ್ಲದ್ದರಿಂದ ಅವನನ್ನು ಪ್ರತ್ಯಕ್ಷಾದಿಪ್ರಮಾಣಗಳಿಂದ ಅರಿಯುವದಕ್ಕೆ ಬರುವದಿಲ್ಲ. ನಾವು ಜೀವರೆಂದೂ ಶ್ರವಣಮನನವಿಜ್ಞಾನಾದಿ ಧರ್ಮಗಳುಳ್ಳವರೆಂದೂ ತಿಳಿಯುವದು ಅಂತಃಕರಣದ ಶ್ರವಣಾದಿವೃತ್ತಿರೂಪವಾದ ಭ್ರಾಂತಿಯಿಂದಾದದ್ದು. ಆದರೆ ಶ್ರವಣಾದಿಗಳಿಂದ ಆಗುವಂತೆ ತೋರುವ ಅರಿವು ನಮ್ಮ ಸ್ವರೂಪವೇ ಆಗಿರುವದರಿಂದ ಅದು ನಿತ್ಯವಾಗಿರುತ್ತದೆ. 'ಶ್ರವಣಮಾಡಿದೆನು ' ಎಂದು ತೋರುವದು ಅಂತಃಕರಣವೃತ್ತಿಯು. ಅದು ಆತ್ಮನ ಅರಿವಲ್ಲ. ನಿತ್ಯವಾದ ಅರಿವು, ಅನಿತ್ಯವಾದ ವೃತ್ತಿ - ಇವುಗಳೆರಡನ್ನೂ ಬಿಡಿಸಿಕೊಳ್ಳಲಾರದೆ ಜನರು ಆತ್ಮನ ವಿಷಯಕ್ಕೆ ಬಗೆ ಬಗೆಯ ವಿಕಲ್ಪಗಳನ್ನು ಮಾಡುತ್ತಿರುವರು. ಆತ್ಮನಲ್ಲಿ ಗುಣಗಳನ್ನೂ ಜೀವ, ಈಶ್ವರ - ಎಂಬ ಭೇದವನ್ನು ಕಲ್ಪಿಸಿರುವದು ಈ ಅಜ್ಞಾನದಿಂದಲೇ ಆಗಿದೆ. ಸರಿಯಾಗಿ

ನೋಡಿದರೆ ಆತ್ಮನನ್ನಾಗಲಿ, ಆತ್ಮಭೇದಗಳನ್ನಾಗಲಿ ಧರ್ಮಗಳನ್ನಾಗಲಿ ಅರಿಯುವದಕ್ಕೆ ಯಾವ ಪ್ರಮಾಣವೂ ಸಾಧಕವಾಗಲಾರದು. ಏಕೆಂದರೆ ಪ್ರಮಾಣವು ಪ್ರಮೇಯವನ್ನು ವಿಷಯೀಕರಿಸೀತೇ ಹೊರತು ಪ್ರಮಾತೃವಿನ ಸ್ವರೂಪವನ್ನು ಎಂದಿಗೂ ವಿಷಯೀಕರಿಸಲಾರದು. ಆತ್ಮನು ತಾನೇ ತನ್ನ ಸ್ವರೂಪವನ್ನು ಅರಿಯುವದಕ್ಕೆ ಅವನಲ್ಲಿ ಎರಡು ಅಂಶಗಳಿರಬೇಕಾಗುವದು. ಅಥವಾ ತನ್ನನ್ನು ಅರಿಯುವದಕ್ಕೆ ತನಗಿಂತ ಬೇರೆಯಾಗಿರುವ ಮತ್ತೊಂದು ಅರಿವು ಇರಬೇಕಾಗುವದು. ಆಗ ಅದನ್ನು ಅರಿಯುವದಕ್ಕೆ ಇನ್ನೊಂದು - ಹೀಗೆ ಕೊನೆಯಿಲ್ಲದ ಅರಿವುಗಳ ಸಾಲು ಬೇಕಾಗುವದು. ಇವೆರಡೂ ಆಗುವ ಹಾಗಿಲ್ಲವಾದ್ದರಿಂದ ನಿತ್ಯಚೈತನ್ಯಸ್ವರೂಪನಾದ ಆತ್ಮನನ್ನು ಅರಿಯುವದಕ್ಕೆ ಮತ್ತೆ ಯಾವ ಪ್ರಮಾಣವೂ ಬೇಕಿಲ್ಲವೆಂದು ನಿಶ್ಚಯಿಸಬೇಕು. ಆತ್ಮನಲ್ಲಿ ಕಲ್ಪಿಸಿರುವ ಅನಾತ್ಮವನ್ನೂ ಅನಾತ್ಮಧರ್ಮಗಳನ್ನೂ ಅಲ್ಲಗಳೆಯುವ ಶಾಸ್ತ್ರಪ್ರಮಾಣದಿಂದ ಆತ್ಮನು ನಿರ್ವಿಶೇಷಾತ್ಮನೇ ಎಂದು ಮನಗಾಣಬೇಕು. ಇದೇ ಆತ್ಮಜ್ಞಾನವು.

## ಉಪನಿಷತ್ತು

**ಓಮ್ ಆತ್ಮಾ ವಾ ಇದಮೇಕ ಏವಾಗ್ರ ಆಸೀತ್ ।**
**ನಾನ್ಯತ್ ಕಿಂಚನ ಮಿಷತ್ । ಸ ಈಕ್ಷತ ಲೋಕಾನ್ನು ಸೃಜಾ ಇತಿ ॥೧॥**

ಪರಬ್ರಹ್ಮವನ್ನು ಜಿಜ್ಞಾಸುಗಳಿಗೆ ಶಾಸ್ತ್ರವು ಉಪದೇಶಿಸುವಾಗ ಮುಖ್ಯವಾಗಿ ಎರಡು ಪ್ರಕ್ರಿಯೆಗಳನ್ನು ವೇದಾಂತದಲ್ಲಿ ಬಳಸಿರುತ್ತದೆ. (೧) ಕಾರ್ಯಕಾರಣ ಪ್ರಕ್ರಿಯೆ (೨) ಅವಸ್ಥಾತ್ರಯಪ್ರಕ್ರಿಯೆ - ಇವುಗಳೇ ಈ ಎರಡು ಪ್ರಕ್ರಿಯೆಗಳಾಗಿವೆ. ಪ್ರಕ್ರಿಯೆ - ಎಂದರೆ ಬ್ರಹ್ಮತತ್ತ್ವವನ್ನು ಬೋಧಿಸುವ ಕ್ರಮ - ಎಂದು ತಿಳಿಯಬೇಕು. ಬ್ರಹ್ಮವು ಮಾತು ಮನಸ್ಸುಗಳಿಗೆ ಗೋಚರವಲ್ಲ. ಆದರೆ ಅದು ಎಲ್ಲರ ಆತ್ಮವೇ ಆಗಿರುವದರಿಂದ ಆಯಾ ಸಾಧಕರ ಅನುಭವಗೋಚರವಾಗಿರುತ್ತದೆ. ಆದ್ದರಿಂದ ಆತ್ಮಾನಾತ್ಮವಿವೇಕಪೂರ್ವಕವಾಗಿ ಶಾಸ್ತ್ರಾಚಾರ್ಯರುಗಳು ಬೋಧಿಸುವ ಕ್ರಮದಂತೆ ಜಿಜ್ಞಾಸುವು ವಿಚಾರಮಾಡಬೇಕು. ಇದಕ್ಕೆ ತಕ್ಕಂತೆ ಅಂತಃಕರಣವನ್ನು ಶಮದಮಾದಿಸಾಧನಗಳಿಂದ ಸ್ವಚ್ಛಗೊಳಿಸಿಕೊಂಡಿರಬೇಕು. ಅನಂತರ ಪ್ರಕ್ರಿಯೆಯನ್ನವಲಂಬಿಸಿ ವಿಚಾರಮಾಡಬೇಕು. ಈ ವಿಚಾರಕ್ರಮದಂತೆ ಐತರೇಯೋಪನಿಷತ್ತಿನಲ್ಲಿ ಕಾರ್ಯಕಾರಣಪ್ರಕ್ರಿಯೆಯನ್ನವಲಂಬಿಸಿ ಆತ್ಮಜ್ಞಾನವನ್ನು ಉಪದೇಶಿಸಿರುತ್ತದೆ. ಆದರೆ ವೇದದಲ್ಲಿ ಹೇಳಿರುವ ಕರ್ಮ-ಜ್ಞಾನಗಳೆರಡರಲ್ಲಿ ಕರ್ಮವು ಕರ್ಮಯೋಗವಾದಾಗ ಕೇವಲ ಅಂತಃಕರಣಶುದ್ಧಿಗೆ ಮಾತ್ರ ಉಪಯೋಗವಾಗುತ್ತದೆ. ಆತ್ಮನನ್ನು

ಅರಿಯಲು ಕೇವಲ ಜ್ಞಾನವೊಂದೇ ಸಾಧನವಾಗಿರುತ್ತದೆ. ಆದ್ದರಿಂದ ಇಲ್ಲಿ ಕಾರ್ಯಕಾರಣಪ್ರಕ್ರಿಯೆಯ ಮೂಲಕ ಆತ್ಮಜ್ಞಾನವನ್ನು ಪ್ರಸ್ತಾಪಮಾಡಲಾಗಿದೆ.

ನಾವು ಕಾಣುತ್ತಿರುವ ಈ ಪ್ರಪಂಚವನ್ನು ವಿಚಾರಮಾಡಿದರೆ ಇದಕ್ಕೆ ಕಾರಣವು ಯಾವದು ? ಎಂಬ ಪ್ರಶ್ನೆಯು ಹುಟ್ಟುತ್ತದೆ. ಏಕೆಂದರೆ ಲೋಕದಲ್ಲಿ ಈ ಪರಿಸ್ಥಿತಿಯು ಇದ್ದುಕೊಂಡಿದೆ. ಉದಾಹರಣೆಗೆ ಮಡಕೆಗೆ ಮಣ್ಣು ಕಾರಣವು ; ಒಡವೆಗೆ ಚಿನ್ನವು ಕಾರಣವು. ಬಟ್ಟೆಗೆ ನೂಲು ಕಾರಣವು. ಹೀಗೆ ವಿಚಾರಮಾಡಿದಂತೆಲ್ಲ ಈ ಪ್ರಪಂಚ ಸೃಷ್ಟಿಗೆ ಯಾರು ಕಾರಣರು ? ಎಂಬ ಪ್ರಶ್ನೆಯು ಹುಟ್ಟುತ್ತದೆ. ಆಗ ಶಾಸ್ತ್ರವು ಈ ನಾಮರೂಪಾತ್ಮಕಪ್ರಪಂಚಕ್ಕೆ ಬ್ರಹ್ಮವೇ ಕಾರಣ - ಎಂದು ತಿಳಿಸುತ್ತಾ ಬ್ರಹ್ಮದ ಜ್ಞಾನವನ್ನು ನಮಗೆ ಉಂಟುಮಾಡಿಕೊಡುತ್ತದೆ. ನಾವು ಈಗಲೆ ಬ್ರಹ್ಮವನ್ನು ಕಾಣದೆ ಇದ್ದರೂ ಬ್ರಹ್ಮದ ಸೃಷ್ಟಿಯನ್ನು ಕಾಣುತ್ತಲೇ ಇರುವೆವು. ಆದ್ದರಿಂದ ಸೃಷ್ಟಿಯನ್ನು ನೋಡಿ ಸೃಷ್ಟಿಕರ್ತನನ್ನು ಊಹಿಸಬಹುದಾಗಿದೆ. ಹೇಗೆಂದರೆ ಒಂದು ಸುಂದರವಾದ ವಿಗ್ರಹವನ್ನು ನೋಡಿದರೆ ಅದನ್ನು ನಿರ್ಮಿಸಿರುವ ಶಿಲ್ಪಿಯನ್ನು ಊಹಿಸಬಹುದಾಗಿದೆ. ಹಾಗೆಯೇ ಪ್ರಪಂಚದ ಸೃಷ್ಟಿವೈಚಿತ್ರ್ಯವನ್ನೂ ಇಲ್ಲಿ ನೋಡಿ ಇದರ ಕರ್ತನನ್ನು ಊಹಿಸಬಹುದಾಗಿದೆ. ಇದೇ ಕಾರ್ಯಕಾರಣಪ್ರಕ್ರಿಯೆಯು. ಈಗ ಮಂತ್ರಾರ್ಥವನ್ನು ವಿಚಾರಮಾಡೋಣ.

ಆತ್ಮನೊಬ್ಬನೇ ಸೃಷ್ಟಿಗೆ ಮುಂಚೆ ಇದ್ದುಕೊಂಡಿದ್ದನು. ಅವನಿಗಿಂತ ಬೇರೆಯಾಗಿ ಏನೇನೂ ಇರಲಿಲ್ಲ. ಆಗ ಅವನು 'ಇನ್ನು ನಾನು ಈ ಹದಿನಾಲ್ಕು ಲೋಕಗಳನ್ನೂ ಸೃಷ್ಟಿಸುವೆನು' - ಎಂದು ಆಲೋಚಿಸಿದನು - ಎಂಬಿದು ಮೊದಲನೆಯ ಮಂತ್ರದ ಸರಳವಾದ ಅರ್ಥವು. ಇಲ್ಲಿ ಆತ್ಮಾ ಎಂದರೆ ನಾನು ಎಂದರ್ಥವಲ್ಲ. ಮತ್ತೇನೆಂದರೆ : .ಯಾವನು ಈ ಎಲ್ಲಾ ಹದಿನಾಲ್ಕುಲೋಕಗಳನ್ನೂ ವ್ಯಾಪಿಸಿಕೊಂಡಿರುವನೋ ಎಲ್ಲವನ್ನೂ ತನ್ನಲ್ಲಿ ಅಡಗಿಸಿಕೊಂಡಿರುವನೋ, ಎಲ್ಲಾ ಪ್ರಾಣಿಗಳ ಒಳಗಿದ್ದು ವಿಷಯಗಳನ್ನು ಭೋಗಿಸುತ್ತಿರುವನೋ ಮತ್ತು ಎಲ್ಲೆಲ್ಲಿಯೂ ಕಡಿವಡೆಯದೆ ವ್ಯಾಪಿಸಿಕೊಂಡಿರುವನೋ ಅವನೇ ಆತ್ಮನೆನಿಸುತ್ತಾನೆ. ಮತ್ತು ತಾನು ಸ್ವತಃ ಚೇತನನೂ ಸ್ವಯಂಜ್ಯೋತಿಯೂ ಆಗಿರುತ್ತಾನೆ. ಇಂಥ ಆತ್ಮನು ಈ ಸೃಷ್ಟಿಗೆ ಮುಂಚೆ ತನಗೆರಡನೆಯದಿಲ್ಲದ ಒಬ್ಬನೇ ಆಗಿದ್ದನು. ಅವನು ಒಮ್ಮೆ ಆಲೋಚಿಸಿದನು . ''ನಾನು ಈ ಲೋಕಗಳನ್ನು ಸೃಷ್ಟಿಮಾಡುವೆನು'' ಎಂದು ಸಂಕಲ್ಪಿಸಿದನು.

ಅನಂತರ ಜಲ, ವಾಯು, ತೇಜಸ್ಸು, ಆಕಾಶ, ಭೂಮಿ- ಇವುಗಳನ್ನೂ ದ್ಯುಲೋಕ, ಅಂತರಿಕ್ಷಲೋಕಗಳನ್ನೂ ಪಾತಾಳಾದಿಲೋಕಗಳನ್ನೂ ಸೃಷ್ಟಿ ಮಾಡಿದನು. ಈ ಎಲ್ಲಾ ಲೋಕಗಳ ರಕ್ಷಣೆಗಾಗಿ ಆಯಾ ಲೋಕಪಾಲಕರುಗಳನ್ನೂ

ಸೃಷ್ಟಿಮಾಡಲು ಅನುಕೂಲಿಸುವಂತೆ ಮೊದಲು ವಿರಾಟ್‌ಪುರುಷನನ್ನು ಸೃಷ್ಟಿಮಾಡಿದನು. ಆ ವಿರಾಟ್‌ಪುರುಷನು ಆಯಾ ಲೋಕಪಾಲಕರುಗಳಾದ ದೇವತೆಗಳನ್ನು ಸೃಷ್ಟಿಮಾಡಿದನು. ಆ ದೇವತೆಗಳೆಲ್ಲರೂ **ಸಂಸಾರ**ವೆಂಬ ಮಹಾಸಮುದ್ರದಲ್ಲಿ ಬಿದ್ದರು. ಇದು ಸೃಷ್ಟಿಕರ್ತನ ಒಂದು ಲೀಲೆಯೇ ಆಗಿರುತ್ತದೆ.

ಈಗ ಶ್ರೀಶಂಕರಭಗವತ್ಪಾದರ ಭಾಷ್ಯದಲ್ಲಿರುವ ವರ್ಣನೆಯಂತೆ ಸಂಸಾರ ಸಮುದ್ರದ ವಿವರವನ್ನು ನೋಡೋಣ. ಈ ಸಮುದ್ರವು ನಮಗೆಲ್ಲ ಪರಿಚಿತವಾಗಿರುವ ಸಮುದ್ರದಂತೆಯೇ ಎಲ್ಲಾ ವಸ್ತುಗಳೂ ಉಳ್ಳದ್ದಾಗಿದೆಯೆಂದು ಅಲ್ಲಿ ವರ್ಣಿಸಲಾಗಿದೆ. ಸಮುದ್ರವು ಯಾವಾಗಲೂ ನೀರಿನಿಂದ ತುಂಬಿರುತ್ತದೆ. ಅದರಂತೆ ಸಂಸಾರಸಮುದ್ರವೂ ಅವಿದ್ಯಾ - ಕಾಮ - ಕರ್ಮಗಳಿಂದ ಉಂಟಾದ ದುಃಖವೆಂಬ ನೀರಿನಿಂದ ತುಂಬಿದೆ. ಈ ಪ್ರಪಂಚದಲ್ಲಿ ದುಃಖಗಳಿಲ್ಲದ ಜೀವರುಗಳೇ ಇಲ್ಲ. ದೇವತೆಗಳಿಗೇ ದುಃಖವಿದೆಯಾದರೆ ಇನ್ನು ಮಾನವರಿಗೆ ಅದು ಇದೆಯೆಂದು ಹೇಳತಕ್ಕದ್ದೇನಿದೆ ? ಇನ್ನು ಸಮುದ್ರದಲ್ಲಿ ತಿಮಿಂಗಿಲಗಳು, ಮೊಸಳೆಗಳು, ಏಡಿಗಳು - ಮುಂತಾದ ಭಯಂಕರವಾದ ಪ್ರಾಣಿಗಳಿವೆ. ಅದರಂತೆ ಇಲ್ಲಿಯೂ ತೀವ್ರವಾದ ರೋಗಗಳು, ಮುಪ್ಪು, ಸಾವು - ಮುಂತಾದ ದುಃಖಗಳಿವೆ. ಸಮುದ್ರಕ್ಕೆ ಹೇಗೆ ಅದರ ನಡುಭಾಗಕ್ಕೆ ಹೋದಾಗ ತುದಿ - ಮೊದಲುಗಳು ಕಾಣುವದಿಲ್ಲವೋ ಹಾಗೆ ಇಲ್ಲಿಯೂ ಸಂಸಾರಸಮುದ್ರಕ್ಕೆ ತುದಿಮೊದಲುಗಳೇ ಇಲ್ಲ. ''ಪುನರಪಿ ಜನನಂ ಪುನರಪಿ ಮರಣಮ್'' ಎಂದಂತೆ ಹುಟ್ಟುಸಾವುಗಳ ಪರಂಪರೆಯೇ ಇದರ ಸ್ವರೂಪವಾಗಿದೆ. ಸಮುದ್ರದಲ್ಲಿ ಬಿದ್ದರೆ ಹೇಗೆ ಏನೂ ಆಲಂಬನವಿಲ್ಲವೋ ಹಾಗೆ ಸಂಸಾರವೂ ನಿರಾಲಂಬನವೇ ಆಗಿದೆ. ಇಲ್ಲಿ ಹೆಂಡತಿ, ಮಕ್ಕಳು, ಬಂಧುಗಳು ಇದ್ದರೂ ಯಾರನ್ನೂ ಅವಲಂಬಿಸುವಂತಿಲ್ಲ. ಒಂದು ವೇಳೆ ಅವಲಂಬನೆಯಿದ್ದರೂ ನೆಮ್ಮದಿಯಿರುವದಿಲ್ಲ. ಹೀಗಾಗಿ ಸಂಸಾರವು ನಿರಾಲಂಬವಾಗಿದೆ.

ಇನ್ನು ಸಂಸಾರದಲ್ಲಿ ಸುಖವೇನೂ ಇಲ್ಲವೆ ? ಇದು ಹೇಗೆ ಸರಿ ? ಎಂದರೆ ನಿಜ ; ಸುಖಾಭಾಸಗಳಿವೆ, ಅವು ನಿತ್ಯಸುಖಗಳಲ್ಲ. ಇದರ ವಿವರ : ಇಂದ್ರಿಯಗಳಿಗೂ ವಿಷಯಗಳಿಗೂ ಸಂಯೋಗವಾದಾಗ ಕ್ಷಣಕಾಲ ಸುಖವು ತೋರುತ್ತದೆ. ಆದರೆ ಅದು ಸುಖದ ಆಭಾಸವೇ ಹೊರತು ನಿಜವಲ್ಲ. ಉದಾಹರಣೆಗೆ ಕಬ್ಬು ತಿಂದರೆ ಸಿಹಿಯಾಗಿದ್ದು ಸುಖವೆನಿಸುತ್ತದೆ. ಆದರೆ ಅದರ ಅನಂತರ ಹಲ್ಲುಗಳು ನೋಯುತ್ತವೆ. ವಿವಾಹಮಾಡಿಕೊಂಡಾಗ ಸುಖವೆನಿಸುತ್ತದೆ. ಸಂಸಾರವನ್ನು ಹೂಡಿದಾಗ ಸಮಸ್ಯೆಗಳು ಎದುರಾಗುತ್ತವೆ. ಅವುಗಳನ್ನು ಪರಿಹರಿಸಿಕೊಳ್ಳುವದೇ

ದುಸ್ತರವಾಗುತ್ತದೆ. ಪರಿಹಾರವಾದರೂ ಮತ್ತೊಂದು ಸಮಸ್ಯೆ ಎದ್ದುಕೊಳ್ಳುತ್ತದೆ. ಹೀಗೆ ಕ್ಷಣಕಾಲದ ಸುಖವು ಸಂಸಾರದಲ್ಲಿದ್ದುಕೊಂಡು ಸಮುದ್ರಪ್ರಯಾಣದಲ್ಲಿ ದೊರಕುವ ಅಲ್ಪವಿಶ್ರಾಂತಿಗೆ ಸಮನಾಗಿರುತ್ತದೆ. ಆದ್ದರಿಂದ ಈ ಮಹಾಸಂಸಾರ ಸಮುದ್ರವನ್ನು ದಾಟುವದು ಬಹಳ ಕಷ್ಟಸಾಧ್ಯವಾಗಿರುತ್ತದೆ.

ಈಗ ಈ ಸಂಸಾರದ ಮತ್ತೂ ಕೆಲವು ದೋಷಗಳನ್ನು ಶ್ರೀಭಗವತ್ಪಾದರು ಮುಂದುವರೆಸಿ ತಿಳಿಸುತ್ತಾರೆ. ಅವು ಹೀಗಿವೆ : ಮಾನವನಿಗೆ ಐದು ಇಂದ್ರಿಯಗಳಿವೆ. ಅವುಗಳಿಗೆ ತಕ್ಕಂತೆ ಐದು ವಿಷಯಗಳೂ ಇವೆ. ಕಿವಿಗೆ ಶಬ್ದ, ಚರ್ಮಕ್ಕೆ ಸ್ಪರ್ಶ, ಕಣ್ಣಿಗೆ ರೂಪ, ನಾಲಗೆಗೆ ರಸ, ಮೂಗಿಗೆ ಗಂಧ- ಹೀಗೆ ಇದ್ದುಕೊಂಡಿದ್ದು ಆಯಾ ಇಂದ್ರಿಯಗಳು ಆಯಾ ವಿಷಯಗಳ ಕಡೆಗೆ ಎಳೆಯುತ್ತವೆ. ಒಂದು ವೇಳೆ ವಿಷಯಗಳು ದೊರೆತರೂ ಕ್ಷಣಕಾಲ ಸುಖವಾಗಿದ್ದು ಅನಂತರ ವಿಯೋಗವಾದಾಗ ದುಃಖವಾಗುತ್ತದೆ. ಇಂಥ ಇಂದ್ರಿಯಸುಖಗಳೆಂಬ ಗಾಳಿಯು ಮನಸ್ಸನ್ನು ಚಂಚಲಗೊಳಿಸುತ್ತದೆ. ಆಗ ಆ ಮನಸ್ಸಿನಲ್ಲಿ ನಾನಾ ವೇದನೆಗಳಾಗುತ್ತವೆ. ಈ ವೇದನೆಗಳೇ ಸಂಸಾರಸಮುದ್ರದ ಅಲೆಗಳು. ಹೀಗೆ ಸಂಸಾರಸಮುದ್ರದ ಕೆಲವು ದೋಷಗಳನ್ನು ತಿಳಿಸಿದ ಅನಂತರ ಆಚಾರ್ಯರು ಮತ್ತೂ ಕೆಲವು ದೋಷಗಳನ್ನು ಹೀಗೆ ತಿಳಿಸುತ್ತಾರೆ. ಸಂಸಾರಸಮುದ್ರದಲ್ಲಿ ಬಿದ್ದಿರುವ ವ್ಯಕ್ತಿಯು ಇಷ್ಟವಿಲ್ಲವಾದರೂ ಕೆಲವು ಸಂದರ್ಭಗಳಿಗೆ ಬದ್ಧನಾಗಿ ಪಾಪಗಳನ್ನು ಮಾಡುತ್ತಾನೆ. ಆ ಪಾಪಗಳ ಫಲವನ್ನು ಅನುಭವಿಸಲು ನರಕಕ್ಕೆ ಹೋಗುತ್ತಾನೆ. ಇಂಥ ಸಾವಿರಾರು ಪಾಪಿಗಳು ನರಕಕ್ಕೆ ಸೇರಿ ಯಮಯಾತನೆಯನ್ನು ಅನುಭವಿಸುವಾಗ ಹಾ ! ಹಾ ! ಎಂದು ಕಿರಿಚಿಕೊಳ್ಳುತ್ತಾರಲ್ಲವೆ ? ಈ ಮಹಾಶಬ್ದದ ಧ್ವನಿಯಿಂದಲೂ ಈ ಸಂಸಾರವು ಕೂಡಿರುತ್ತದೆ. ಹೀಗೆ ಭಯಂಕರವಾದ ಸಂಸಾರದಲ್ಲಿಯೂ ಇದನ್ನು ದಾಟಲು ಒಂದು ದೋಣಿಯಿದೆ; ಅದಕ್ಕೆ **ಪೂರ್ಣಜ್ಞಾನ**ವೆಂದು ಹೆಸರು. ಇದರ ವಿವರ : ಈ ದೋಣಿಯಲ್ಲಿ ಸತ್ಯ, ಸರಳತೆ, ದಾನ, ದಯೆ, ಅಹಿಂಸೆ, ಶಮ, ದಮ, ಧೃತಿ - ಮುಂತಾದ ಆತ್ಮಗುಣಗಳೆಂಬ ಪ್ರಯಾಣಕಾಲದಲ್ಲಿ ಬಳಸುವ ಆಹಾರಪದಾರ್ಥವಿದೆ. ಇನ್ನು ಈ ದೋಣಿಯು ಸಂಚಾರಮಾಡಲು ಅಪಾಯವಿಲ್ಲದ ಗೊತ್ತಾದ ಮಾರ್ಗವೂ ಇದೆ. ಈ ಮಾರ್ಗಕ್ಕೆ ಸತ್ಸಂಗಸರ್ವತ್ಯಾಗಮಾರ್ಗವೆಂದು ಹೆಸರು. ಈ ದೋಣಿಯಲ್ಲಿ ಕುಳಿತು ಪ್ರಯಾಣಮಾಡುವವರು ಮಾತ್ರವೇ ಮೋಕ್ಷವೆಂಬ ತೀರವನ್ನು ತಲುಪುತ್ತಾರೆ- ಎಂದು ಶ್ರೀಶಂಕರಭಗವತ್ಪಾದರು ತಿಳಿಸುತ್ತಾರೆ.

ಅನಂತರ ಆ ಸೃಷ್ಟಿಕರ್ತನು ಈ ದೇವತೆಗಳೆಲ್ಲರನ್ನೂ ಹಸಿವು - ಬಾಯಾರಿಕೆಗಳಿಂದ ಕೂಡಿಸಿದನು - ಎಂದರೆ ಸಂಸಾರವು ಹಸಿವುಬಾಯಾರಿಕೆಗಳಿಂದ ಕೂಡಿದ್ದು

- ಎಂದರ್ಥ. ಹೀಗೆ ದೇವತೆಗಳು ಸಂಸಾರಸಮುದ್ರದಲ್ಲಿ ಬಿದ್ದಾಗ ಅವರು ಆ ಸೃಷ್ಟಿಕರ್ತನನ್ನು ನಮಗೆ ಆಶ್ರಯವನ್ನು ತೋರಿಸು - ಎಂದು ಕೇಳಿದರು. ಆಗ ಅವನು ಒಂದು ಗೋವನ್ನು ಕೊಟ್ಟನು. ದೇವತೆಗಳು 'ಇದು ನಮಗೆ ಸಾಲದು' ಎಂದರು. ಅನಂತರ ಒಂದು ಕುದುರೆಯನ್ನು ಕೊಟ್ಟನು. ಆಗಲೂ ದೇವತೆಗಳು ''ಇದೂ ಸಾಲದು'' ಎಂದರು. ಆಗ ಒಬ್ಬ ಮನುಷ್ಯನನ್ನು ಕೊಟ್ಟನು. ಆಗ ''ಆಗಲಿ, ಇದು ಸಾಕು'' ಎಂದರು. ಮತ್ತು 'ಸುಕೃತವಾಯಿತು' ಎಂದರು.

ಸು+ಕೃತಮ್ ಎಂದು ಬಿಡಿಸಿದಾಗ 'ಒಳ್ಳೆಯ ಕೆಲಸವಾಯಿತು' ಎಂದರ್ಥ. ದೇವತೆಗಳಿಗೆ ಆಶ್ರಯವು ಬೇಕಾಗಿತ್ತು. ಆದರೆ ಸೃಷ್ಟಿಕರ್ತನು ಮೊದಲು ತೋರಿಸಿದ ಗೋವು - ಕುದುರೆಗಳು ಸಾಕಾಗಲಿಲ್ಲ. ಏಕೆಂದರೆ ಪ್ರಾಣಿಶರೀರಗಳಲ್ಲಿ ಮನುಷ್ಯನ ಶರೀರದಲ್ಲಿರುವಂತೆ ಎಲ್ಲಾ ಜ್ಞಾನೇಂದ್ರಿಯಕರ್ಮೇಂದ್ರಿಯಗಳೂ ಇರುವದಿಲ್ಲ. ಎಲ್ಲಾ ದೇವತೆಗಳಿಗೂ ಸ್ಥಾನವು ಬೇಕಾದರೆ ಪುರುಷಶರೀರವೇ ಬೇಕು. ಇದರಲ್ಲಿ ಎಲ್ಲರಿಗೂ ಅವಕಾಶವಿರುತ್ತದೆ. ಸೃಷ್ಟಿಯಲ್ಲಿ ಮಾನವಶರೀರವೇ ಉಳಿದ ಶರೀರಗಳಿಗಿಂತ ಪರಿಪೂರ್ಣವಾಗಿದೆ. ಮತ್ತು ಇಂದ್ರಿಯಗಳೂ ಒಂದಕ್ಕೊಂದು ಹೊಂದಿಕೊಂಡು ಕೆಲಸಮಾಡುತ್ತವೆ. ಮತ್ತು ಫಲವು ಯಜಮಾನನಿಗೆ ಆಗುವದು. ಉದಾಹರಣೆಗೆ ಕಣ್ಣು ನೋಡಿ ಗೊತ್ತುಪಡಿಸಿದ ಆಹಾರವನ್ನು ಕೈಯು ತೆಗೆದುಕೊಂಡು ಬಾಯೊಳಗೆ ಇಟ್ಟಾಗ ನಾಲಿಗೆಯು ರುಚಿನೋಡಿ ಒಳಕ್ಕೆ ರವಾನಿಸುತ್ತದೆ. ಆದರೆ ಪ್ರಾಣಿಗಳಿಗೆ ಈ ಅನುಕೂಲವಿಲ್ಲ. ಅವು ನೇರಾಗಿ ಬಾಯಿಂದಲೇ ಆಹಾರವನ್ನು ಸ್ವೀಕರಿಸುತ್ತವೆ. ಹೀಗೆ ದೇವತೆಗಳೆಲ್ಲರಿಗೂ ಸೂಕ್ತವಾದ ವಾಸಸ್ಥಾನವು ಮಾನವ ಶರೀರದಲ್ಲಿರುತ್ತದೆ. ಆದ್ದರಿಂದ ಅಗ್ನ್ಯಾದಿದೇವತೆಗಳೆಲ್ಲರೂ ಪುರುಷ (ಮಾನವ) ಶರೀರವನ್ನು ಸ್ವೀಕರಿಸಿ ಒಬ್ಬೊಬ್ಬರೂ ಅದರೊಳಗೆ ಪ್ರವೇಶಿಸಿದರು. ಯಾರು ಯಾರು ಎಲ್ಲೆಲ್ಲಿ ಪ್ರವೇಶಿಸಿದರೆಂಬುದನ್ನು ಶ್ರುತಿಯು ಹೀಗೆ ತಿಳಿಸುತ್ತಿದೆ : -

**''ಅಗ್ನಿರ್ವಾಕ್ ಭೂತ್ವಾ ಮುಖಂ ಪ್ರಾವಿಶತ್..... ರೇತೋ ಭೂತ್ವಾ ಶಿಶ್ನಂ ಪ್ರಾವಿಶತ್''** (೧-೨-೪)

ಈ ಮಂತ್ರದ ಅರ್ಥವನ್ನು ವಿಚಾರಮಾಡೋಣ. ಸೃಷ್ಟಿಯಲ್ಲಿರುವ ಎಲ್ಲಾ ಪ್ರಾಣಿಶರೀರಗಳಲ್ಲಿ ಮಾನವಶರೀರವೇ ಅತ್ಯಂತಮಿಗಿಲಾದುದು. ಆದ್ದರಿಂದ ಇದು ದೇವತೆಗಳ ವಾಸಕ್ಕೆ ಯೋಗ್ಯವಾಗಿದೆ. ಮನುಷ್ಯನಿಗೆ ನಡೆಯಲು ಕಾಲುಗಳು, ತೆಗೆದುಕೊಳ್ಳಲು ಕೈಗಳು, ಕೇಳುವದಕ್ಕೆ ಕಿವಿಗಳು, ನೋಡುವದಕ್ಕೆ ಕಣ್ಣುಗಳು, ಮಾತನಾಡಲು ಹಾಗೂ ರುಚಿ ನೋಡಲು ನಾಲಗೆ - ಇವೆಲ್ಲವೂ ಬಿಡಿಬಿಡಿಯಾಗಿವೆ.

ಎಲ್ಲಕ್ಕಿಂತ ಮಿಗಿಲಾಗಿ ಆಲೋಚನೆಮಾಡಲು ಮನಸ್ಸು, ನಾಳೆಗೇನು ? ಮುಂದಿನ ಜನ್ಮಕ್ಕೇನು ? ಇತ್ಯಾದಿ ವಿಚಾರಮಾಡುವ ಶಕ್ತಿ - ಎಲ್ಲವೂ ಇದೆ. ಆದ್ದರಿಂದ ಸೃಷ್ಟಿಯಲ್ಲಿ ಮಾನವನೇ ಶ್ರೇಷ್ಠನೆಂದು ತೀರ್ಮಾನಿಸಿ ಈ ಮಾನವನ ಶರೀರವನ್ನು ಪ್ರವೇಶಿಸಿದರು. ಇದರ ವಿವರ ಹೀಗಿದೆ : ಅಗ್ನಿದೇವತೆಯು ಮಾತಿನ ರೂಪದಲ್ಲಿ ಮುಖವನ್ನು ಹೊಕ್ಕನು. ಇದೇ ರೀತಿಯಾಗಿ ವಾಯುದೇವನು ಪ್ರಾಣನಾಗಿ ಮೂಗನ್ನು ಪ್ರವೇಶಿಸಿದನು. ಸೂರ್ಯನು ನೋಡುವ ಕಣ್ಣಾಗಿ ಎರಡು ಕಣ್ಣುಗಳನ್ನು ಒಳಹೊಕ್ಕನು. ದಿಕ್ಕುಗಳು ಕೇಳುವ ಕಿವಿಗಳಾಗಿ ಶ್ರೋತ್ರವನ್ನು ಪ್ರವೇಶಿಸಿದರು. ಓಷಧಿವನಸ್ಪತಿಗಳು (ಪೈರು - ಮುಂತಾದವು) ಕೂದಲುಗಳಾಗಿ ಚರ್ಮವನ್ನು ಹೊಕ್ಕರು. ಚಂದ್ರನು ಮನಸ್ಸಾಗಿ ಹೃದಯವನ್ನು ಹೊಕ್ಕನು. ಮೃತ್ಯುವು ಅಪಾನನಾಗಿ ನಾಭಿ(ಹೊಕ್ಕಳು) ಯನ್ನು ಹೊಕ್ಕನು. ಜಲದೇವತೆಗಳು ರೇತಸ್ಸಾಗಿ ಶಿಶ್ನವನ್ನು ಹೊಕ್ಕರು. ಹೀಗೆ ಉಪನಿಷತ್ತಿನಲ್ಲಿ ವಿವರಿಸಲಾಗಿದೆ. ಇದರ ಅಭಿಪ್ರಾಯವೇನೆಂದರೆ ಸೃಷ್ಟಿಯಲ್ಲಿ ಮನುಷ್ಯನಿಗೆ ಸಮಾನನಾದ ಸೌಕರ್ಯಗಳಿಂದ ಕೂಡಿದ ಜಂತುಗಳಾವುವೂ ಇಲ್ಲ. ಪುರಾಣಗಳಲ್ಲಿ ತಿಳಿಸುವಂತೆ ೮೪ ಲಕ್ಷ ಬಗೆಯ ಜೀವರಾಶಿಗಳಲ್ಲಿ ಮಾನವಜನ್ಮವೇ ಶ್ರೇಷ್ಠವು. ಆದ್ದರಿಂದ ಇಂಥ ಸೌಕರ್ಯವಿಶಿಷ್ಟವಾದ ಜನ್ಮವು ಬಂದಾಗ, ಅದನ್ನು ಸಾರ್ಥಕಪಡಿಸಿಕೊಳ್ಳುವದು ಮಾನವನ ಕರ್ತವ್ಯವಾಗಿರುತ್ತದೆ.

ಈಗ ಉಪನಿಷತ್ತು ಮುಂದುವರೆದು ಹೀಗೆ ತಿಳಿಸುತ್ತದೆ : ದೇವತೆಗಳಿಗೆ ಆಶ್ರಯವೇನೋ ದೊರಕಿತು. ಆದರೆ ಅವರುಗಳಿಗೂ ಮನುಷ್ಯರಂತೆ ಹಸಿವು ಬಾಯಾರಿಕೆಗಳು ಉಂಟೆಂಬುದನ್ನು ಈಗ ತಿಳಿಸುತ್ತಾರೆ. ಈ ಹಸಿವುಬಾಯಾರಿಕೆಗಳು ಕೂಡ ಆ ಸೃಷ್ಟಿಕರ್ತನಾದ ಭಗವಂತನನ್ನು ಸಮೀಪಿಸಿ 'ನಮಗೂ ಒಂದು ಜಾಗವನ್ನು ಕೊಡು' ಎಂದು ಕೇಳಿಕೊಂಡವು. ಆಗ ಸೃಷ್ಟಿಕರ್ತನು ಆಲೋಚಿಸಿ ''ಈ ದೇವತೆಗಳಲ್ಲಿಯೇ ನಿಮ್ಮನ್ನೂ ಅಡಕಮಾಡಿಕೊಳ್ಳುವೆನು''ಎಂದು ಹೇಳಿ ಆ ದೇವತೆಗಳೊಡನೆ ಈ ಹಸಿವುಬಾಯಾರಿಕೆಗಳಿಗೂ ಸ್ಥಾನವನ್ನು ಕಲ್ಪಿಸಿದನು. ಇದರಿಂದ ದೇವತೆಗಳು ಹಸಿವು ಬಾಯಾರಿಕೆಗಳುಳ್ಳವರಾದರು. ಇದರ ಅಭಿಪ್ರಾಯವೇನೆಂದರೆ ನಾವು ದೇವತಾಸಾಯುಜ್ಯವನ್ನು ಪಡೆದರೂ ಸಂಸಾರವನ್ನು ದಾಟಿದವರಾಗುವದಿಲ್ಲ - ಎಂದಾಯಿತು.

ಹಾಗಾದರೆ ದೇವತೆಗಳೂ ನಮ್ಮಂತೆಯೇ ಆಹಾರವನ್ನು ತೆಗೆದುಕೊಳ್ಳುತ್ತಾರೆಯೆ ? ಎಂದರೆ ಹಾಗಲ್ಲ. ದೇವತೆಗಳು ಆಹಾರವನ್ನು ಬಾಯಿಯಿಂದ ನಾವು ತಿನ್ನುವಂತೆ ತಿನ್ನುವದಿಲ್ಲ. ಆದರೆ ಆಹಾರವನ್ನು ನೋಡಿದರೆ ಸಾಕು. ಅವರು ತೃಪ್ತರಾಗಿಬಿಡುತ್ತಾರೆ. ಅದಕ್ಕಾಗಿಯೇ ನೈವೇದ್ಯಕಾಲಕ್ಕೆ ಬೇರೆ ಯಾರೂ

ನೋಡಬಾರದೆಂತ ನಿಯಮವಿದೆ. ಶ್ರೀವೈಷ್ಣವರಂತೂ ಆ ಕಾಲಕ್ಕೆ ತೆರೆಹಾಕುತ್ತಾರೆ. ಒಟ್ಟಿನಲ್ಲಿ ''ನಿವೇದನ''ಎಂಬುದು ಕಣ್ಣಿನ ದೃಷ್ಟಿ ಬಿದ್ದದ್ದರಿಂದಲೇ ಪೂರ್ಣವಾಗುವದು. ಹೀಗೆ ಹಸಿವು ಬಾಯಾರಿಕೆಗಳೊಡನೆ ದೇವತೆಗಳನ್ನು ಸಂಬಂಧಿಸಿದ್ದರಿಂದ ಅವರೂ ಸಂಸಾರಿಗಳೇ - ಎಂದಾಯಿತು. ಇನ್ನು ಮಾನವನು ಈ ದೇವತೆಗಳನ್ನೇ ಯಜ್ಞಯಾಗಾದಿಗಳಿಂದ ಅಥವಾ ಯೋಗ-ಧ್ಯಾನಾದಿಗಳಿಂದ ಆರಾಧನೆಮಾಡಿ ಆಯಾ ದೇವತಾಸಾಯುಜ್ಯವನ್ನು ಪಡೆದರೂ ಸಂಸಾರಿಯೇ ಆಗಿ ಉಳಿದುಕೊಳ್ಳುತ್ತಾನೆ. ಮುಕ್ತನಾಗುವದಿಲ್ಲ. ಆದ್ದರಿಂದ ಸರ್ವಸಂಸಾರಧರ್ಮಗಳನ್ನೂ ಮೀರಿದ ಮೋಕ್ಷವನ್ನು ಪಡೆಯಬೇಕಾದರೆ ಪರಬ್ರಹ್ಮಜ್ಞಾನವನ್ನೇ ಸಂಪಾದಿಸಿಕೊಳ್ಳಬೇಕು - ಎಂದಭಿಪ್ರಾಯ.

ಈಗ ಈ ಸಂಸಾರಲಕ್ಷಣಗಳನ್ನು ತಿಳಿಸುತ್ತಾರೆ (೧) ಹಸಿವು, ಬಾಯಾರಿಕೆಗಳು (೨) ಶೋಕ, ಮೋಹಗಳು (೩) ಜನ್ಮ, ಮರಣಗಳು - ಹೀಗೆ ಆರು ದೋಷಗಳು ಸಂಸಾರದಲ್ಲಿವೆ. ದೇಹವನ್ನು ಧರಿಸಿ ಅದರಲ್ಲಿ 'ನಾನು' ಎಂದು ಅಭಿಮಾನ ಪಟ್ಟುಕೊಳ್ಳುವದೇ ಸಂಸಾರವು. ಹೇಗೆಂದರೆ ದೇಹಧಾರಿಯಾದವನು ಆಯಾ ಕಾಲಕ್ಕೆ ಉಂಟಾದ ಹಸಿವು - ಬಾಯಾರಿಕೆಗಳನ್ನು ಕಳೆದುಕೊಳ್ಳಲೇಬೇಕು. ಹಾಗೆಯೇ ಮನಸ್ಸಿನಲ್ಲಿ ಉಂಟಾಗುವ ಶೋಕಮೋಹಗಳನ್ನೂ ಅನುಭವಿಸಬೇಕು ಮತ್ತು ದೇಹವು ನಾನು - ಎಂದುಕೊಂಡದ್ದರಿಂದ ಅದಕ್ಕೆ ಒದಗುವ ಜರಾಮೃತ್ಯುಗಳನ್ನೂ ಅನುಭವಿಸಬೇಕು. ಹೀಗಾಗಿ ಈ ಜೀವಾತ್ಮನು ಸಂಸಾರಿಯಾಗಿಯೇ ಉಳಿಯುತ್ತಾನೆ. ಸಂಸಾರ - ಎಂದರೆ ಒಂದು ದೇಹದಿಂದ ಇನ್ನೊಂದು ದೇಹಕ್ಕೆ ಓಡಾಡುವದು - ಎಂದರ್ಥ. ಈ ಜೀವನಿಗೆ ನಾಶವಿಲ್ಲವಾದರೂ ದೇಹವು ನಾನೆಂಬ ಅಭಿಮಾನನಿಮಿತ್ತ ಜನ್ಮಾಂತರಗಳಾಗುತ್ತಲೇ ಇವೆ. ಅಂತೂ ದೇವತೆಗಳಿಂದ ಆರಂಭಿಸಿ ಸ್ತಂಬ (ಹುಳು)ದವರೆಗಿನ ಜೀವರೆಲ್ಲರೂ ಸಂಸಾರಿಗಳೇ ಎಂದು ವೇದಾಂತಸಿದ್ಧಾಂತವು ತಿಳಿಸುತ್ತದೆ.

ಈಗ ಸೃಷ್ಟಿಕರ್ತನು ಜೀವರುಗಳ ಹಸಿವುಬಾಯಾರಿಕೆಗಳ ಪರಿಹಾರಕ್ಕಾಗಿ ಮತ್ತೊಮ್ಮೆ ಆಲೋಚಿಸಿ ಜಲದೇವತೆಯನ್ನು ಕುರಿತು ತಪಸ್ಸುಮಾಡಿದನು. ಇಲ್ಲಿ ತಪಸ್ಸು ಎಂದರೆ ಆಲೋಚನೆ ಎಂದರ್ಥ. ಆಗ ಜಲದೇವತೆಯಿಂದ ಒಂದು ಘನ (ಗಟ್ಟಿ)ವಾದ ವಸ್ತುವು ಉಂಟಾಯಿತು. ಅದೇ ಅನ್ನವಾಗಿ ಜೀವರುಗಳಿಗೆಲ್ಲ ಆಹಾರವಾಯಿತು. ಹಸಿವೂ ಪರಿಹಾರವಾಯಿತು. ಆದರೆ ಪ್ರಾರಂಭದಲ್ಲಿ ಈ ಜೀವಾತ್ಮನಿಗೆ ಅನ್ನವನ್ನು ಹೇಗೆ ಸ್ವೀಕರಿಸಬೇಕೆಂದು ತಿಳಿಯದೆ ಒಂದೊಂದಾಗಿ ತನ್ನ ಇಂದ್ರಿಯಗಳನ್ನೆಲ್ಲ ಬಳಸಲಾರಂಭಿಸಿದನು. ಕಿವಿ, ಕಣ್ಣು, ಮೂಗು, ಮಾತು, ನಾಲಗೆ- ಇತ್ಯಾದಿ ಇಂದ್ರಿಯಗಳನ್ನು ಬಳಸಿದಾಗ ಯಾವವೂ ಅನ್ನವನ್ನುಒಳಕ್ಕೆ ಸ್ವೀಕರಿಸಲಿಲ್ಲ. ಕೊನೆಗೆ

ಅಪಾನನೆಂಬ ವಾಯುವನ್ನು ಅನ್ನಸ್ವೀಕಾರಕ್ಕೆ ಬಳಸಿದಾಗ ಅನ್ನವನ್ನು ಹಿಡಿಯಲು ಸಾಧ್ಯವಾಯಿತು. ಪ್ರಾಣವೆಂಬ ಮುಖ್ಯವಾದ ದೇವತೆಯ ಒಂದು ಗ್ರಹಣವ್ಯಾಪಾರವೇ ಅಪಾನವು - ಎಂದರೆ ಉಸಿರನ್ನು ಒಳ್ಳಕ್ಕೆಳೆದುಕೊಳ್ಳುವಿಕೆ - ಎಂದರ್ಥ. ಇದರಿಂದ ಬಾಯಿಯ ಮೂಲಕ ಅನ್ನವು ಹೊಟ್ಟೆಯನ್ನು ಸೇರಿ ಆಹಾರವಾಗಿ ಹಸಿವನ್ನು ಕಳೆಯಿತು - ಎಂದಭಿಪ್ರಾಯ. ಹೀಗೆ ಜೀವಾತ್ಮರೂಪದಿಂದ ಪರಬ್ರಹ್ಮವು ಉಪಾಧಿನಿಮಿತ್ತ ಸಂಸಾರಿಯಾಗಿ ಪರಿಣಮಿಸಿತು - ಎಂದರ್ಥ.

## ಆತ್ಮನು ತಾನೇ ಜೀವರೂಪದಿಂದ ಶರೀರವನ್ನು ಪ್ರವೇಶಿಸಿದನು

ಪರಬ್ರಹ್ಮವು ಜಗತ್ತನ್ನು ಸೃಷ್ಟಿಸಿ ನಾಮರೂಪಗಳನ್ನು ವ್ಯಾಕರಣಮಾಡಿ ಸೃಷ್ಟವಾದ ಪ್ರಪಂಚದಲ್ಲಿ ಜೀವಾತ್ಮರೂಪದಿಂದ ಪ್ರವೇಶಿಸಿತು - ಎಂದು ಈವರೆಗೆ ತಿಳಿದಿದೆ. ಈ ಸೃಷ್ಟಿಯಲ್ಲಿ ಪ್ರಧಾನವಾಗಿ ಮನುಷ್ಯಶರೀರವನ್ನು ಆಶ್ರಯಿಸಿ ಬ್ರಹ್ಮವು ಅನ್ನವನ್ನು ಸ್ವೀಕರಿಸಲು ತಾನು ಅಪಾನವೆಂಬ ವಾಯುರೂಪದಿಂದ ಅನ್ನವನ್ನು ಹಿಡಿದುಕೊಂಡಿತು - ಎಂದು ಈವರೆಗೆ ತಿಳಿಸಿದೆ. ಇಲ್ಲಿ ಅಪಾನವೆಂದರೆ ಉಸಿರನ್ನು ಒಳಕ್ಕೆ ಎಳೆದುಕೊಳ್ಳುವಿಕೆ ಎಂದರ್ಥ. ಇದನ್ನು ಉಚ್ಛ್ವಾಸವೆಂದೂ ಕರೆಯುತ್ತಾರೆ, ಇದರಿಂದಲೇ ಅನ್ನವನ್ನು ಹೊಟ್ಟೆಯೊಳಕ್ಕೆ ಎಳೆದುಕೊಳ್ಳುವದು ಸಾಧ್ಯವಾಗುತ್ತದೆ. ಹೀಗೆ ಉಸಿರಾಟದ ಕ್ರಿಯೆಯಿಂದಲೇ ನಾವು ಬದುಕಿರುತ್ತೇವೆ. ಈಗ ಬ್ರಹ್ಮವು ಆಲೋಚಿಸಿದ್ದೇನೆಂದರೆ ಶರೀರದಲ್ಲಿ ಪ್ರಾಣಾದಿವಾಯುಗಳು ಒಂದೊಂದು ತಮ್ಮ ತಮ್ಮ ಕ್ರಿಯೆಗಳನ್ನು ಮಾಡುತ್ತಿರುವಾಗ ಈ ಸಂಘಾತದಲ್ಲಿ ನಾನು ಯಾರು ? - ಎಂದು ಜಿಜ್ಞಾಸೆ ಮಾಡಲಾರಂಭಿಸಿತು. ಮತ್ತು ಈ ಪ್ರಾಣಾಪಾನಾದಿಕ್ರಿಯೆಗಳೂ ಕೂಡ ಸೃಷ್ಟಿಕರ್ತನಾದ ನಾನು ಇಲ್ಲವಾದರೆ ಇವು ಕೆಲಸಮಾಡುವದಾದರೂ ಹೇಗೆ? ಎಂದು ಆಲೋಚಿಸಿತು. ನಮ್ಮಗಳ ಶರೀರವು ಕಾರ್ಯಕರಣಸಂಘಾತ ರೂಪವಾಗಿದೆ - ಎಂದರೆ ಒಂದಕ್ಕೊಂದು ಹೊಂದಿಕೊಂಡು ಕೆಲಸಮಾಡುತ್ತಿದೆ. ಉದಾಹರಣೆಗೆ ನಮ್ಮ ಕಾಲಿಗೆ ಒಂದು ಮುಳ್ಳು ಚುಚ್ಚಿದೆ ಎಂದಿಟ್ಟುಕೊಳ್ಳೋಣ. ಕೂಡಲೆ ನೋವಾಗುತ್ತದೆ. ಮತ್ತು ಅದನ್ನು ತೆಗೆಯಬೇಕು - ಎನಿಸುತ್ತದೆ. ಈ ಸಂದರ್ಭದಲ್ಲಿ ಮುಳ್ಳು ಚುಚ್ಚಿರುವದನ್ನು ನೋಡಿದ್ದು ಕಣ್ಣುಗಳು. ಮುಳ್ಳು ನೆಟ್ಟಿರುವದು ಕಾಲಿನಲ್ಲಿ, ಅದನ್ನು ತೆಗೆಯಬೇಕೆಂದು ತೀರ್ಮಾನಿಸಿದ್ದು ಮನಸ್ಸು, ತೆಗೆಯಲು ಉಪಯೋಗಿಸಿದ್ದು ಕೈ. ಈ ಕಣ್ಣು - ಕಾಲು-ಮನಸ್ಸು-ಕೈ ಇವುಗಳ ಗುಂಪಿನಲ್ಲಿ 'ನಾನು' ಎಂಬಿದು ಯಾವದು ? ಇದನ್ನು ಗೊತ್ತುಪಡಿಸಲು ಹೋದಾಗ ಇವು

ಯಾವವೂ ನಾನಲ್ಲವೆಂದೇ ಗೊತ್ತಾಗುತ್ತದೆ. ಏಕೆಂದರೆ ನನ್ನ ಕಣ್ಣು, ನನ್ನ ಕೈ - ಹೀಗೆಯೇ ನಾವು ವ್ಯವಹಾರ ಮಾಡುತ್ತೇವೆ. ಲೋಕವ್ಯವಹಾರದಲ್ಲಿಯೂ ನನ್ನದು ಎಂಬುದಕ್ಕಿಂತ ನಾನು- ಎಂಬಿದು ಬೇರೆಯಾಗಿಯೇ ಇರುತ್ತದೆ. ಆದರೆ ಆ ನಾನು ಯಾವದು ? ಎಂಬಿದು ಮಾತ್ರ ನಿರ್ಧಾರವಾಗಿರುವದಿಲ್ಲ ; ಆಯಾ ಕಾಲಕ್ಕೆ ಆಯಾ ಇಂದ್ರಿಯ-ಮನೋಬುದ್ಧಿಗಳನ್ನೇ ನಾನು ಎನ್ನುತ್ತೇವೆ. ಈ ಪರಿಸ್ಥಿತಿಯಲ್ಲಿ ನಿಜವಾದ 'ತಾನು' ಗೂಢವಾಗಿದೆ. ಆದರೆ ಅದೇ ಆತ್ಮನು ಅಥವಾ ಪರಬ್ರಹ್ಮವು. ಪ್ರಕೃತ ಈ ನಾನು ಯಾರು ? ಎಂಬ ಪ್ರಶ್ನೆಯು ಜಿಜ್ಞಾಸ್ಯವಾಗಿ ಉಳಿಯಿತು. ಈಗ ವಿಚಾರವನ್ನು ಮುಂದುವರಿಸೋಣ.

ಜಗತ್ಸೃಷ್ಟಿಕರ್ತೃವಾದ ಪರಮಾತ್ಮನು ಸೃಷ್ಟಿಯ ಆದಿಯಲ್ಲಿ ಹೀಗೆ ಆಲೋಚಿಸಿದನು. ಶರೀರೇಂದ್ರಿಯಪ್ರಾಣಮನೋಬುದ್ಧ್ಯಾದಿಗಳನ್ನು ಸೃಷ್ಟಿ ಮಾಡಿದ್ದು ಸರಿ. ಆದರೆ ಇವು ನಾನಿಲ್ಲದೆ ಹೇಗೆ ತಾನೆ ಬದುಕಿಯಾವು ? ಎಂದು ಚಿಂತಿಸಿ ಈ ಕಾರ್ಯಕರಣಸಂಘಾತರೂಪವಾದ ಶರೀರದಲ್ಲಿ ತಾನೇ ಪ್ರವೇಶಿಸಿದನು. ಹಾಗೆ ಪ್ರವೇಶಿಸುವಾಗ ಎಲ್ಲಿಂದ ಒಳಹೊಕ್ಕನು ? ಎಂಬುದನ್ನು ಶ್ರುತಿಯು ಹೀಗೆನ್ನುತ್ತಿದೆ. ''ಸೀಮಾನಂ ವಿದಾರ್ಯ ಏತಯಾ ದ್ವಾರಾ ಪ್ರಾಪದ್ಯತ''-ಇದರ ಅಭಿಪ್ರಾಯವೇನೆಂದರೆ : ಶರೀರದಲ್ಲಿ ತಲೆಯು ಪ್ರಧಾನವಾದದ್ದು. ಇಲ್ಲಿಯೇ ನವದ್ವಾರಗಳ ಪೈಕಿ ಏಳು ದ್ವಾರಗಳಿವೆ. ಆದರೂ ಈ ದ್ವಾರಗಳು ಈಗಾಗಲೇ ಬೇರೆ ದೇವತೆಗಳಿಂದ ಪ್ರವೇಶಕ್ಕಾಗಿ ಬಳಸಲ್ಪಟ್ಟಿರುವದರಿಂದ ಬ್ರಹ್ಮವು ಈ ಯಾವ ದ್ವಾರಗಳಿಂದಲೂ ಒಳಕ್ಕೆ ಹೋಗಲು ಇಷ್ಟಪಡಲಿಲ್ಲ. ಈ ದ್ವಾರದೇವತೆಗಳನ್ನು ಉಪನಿಷತ್ತಿನಲ್ಲಿ ವರ್ಣಿಸಲಾಗಿದೆ. ಹೇಗೆಂದರೆ : ವಾಕ್ಕು (ಮಾತು) ಅಗ್ನಿದೇವತೆಯ ಅಂಶವು. ಆದ್ದರಿಂದ ಅಗ್ನಿದೇವತೆಯು ಮುಖದ್ವಾರದಿಂದ ಶರೀರದ ಒಳಹೊಕ್ಕನು. ಹೀಗೆ ವಾಯುದೇವನು ಪ್ರಾಣನಾಗಿ ಮೂಗಿನಿಂದ ಒಳಹೊಕ್ಕನು. ಅನಂತರ ಸೂರ್ಯನು ದೃಷ್ಟಿರೂಪನಾಗಿ ಕಣ್ಣುಗಳನ್ನು ಒಳಹೊಕ್ಕನು. ದಿಗ್ದೇವತೆಗಳು ಶಬ್ದರೂಪರಾಗಿ ಕಿವಿಗಳ ಮೂಲಕ ಪ್ರವೇಶಿಸಿದರು. ಹೀಗೆ ಆಯಾ ದೇವತೆಗಳು ಆಯಾ ಇಂದ್ರಿಯಗಳ ಮೂಲಕ ಶರೀರವನ್ನು ಪ್ರವೇಶಿಸಲಾಗಿ ಆತ್ಮನಿಗೆ ಪ್ರವೇಶದ್ವಾರವು ಲಭ್ಯವಾಗಲಿಲ್ಲ. ಆಗ ಆತ್ಮನು ಈ ಎಲ್ಲಾ ದೇವತೆಗಳ ಅನುಗ್ರಹಾರ್ಥವಾಗಿ ಈವರೆಗೆ ಯಾರೂ ಪ್ರವೇಶಿಸದ ತಲೆಯ ಮೇಲೆ ನಡುಭಾಗದಲ್ಲಿರುವ ನೆತ್ತಿಯ ದ್ವಾರದಿಂದ ಶರೀರವನ್ನು ಪ್ರವೇಶಿಸಿದನು -ಎಂದು ಶ್ರುತಿಯು ತಿಳಿಸುತ್ತದೆ.

ಈ ವಿವರಣೆಯಿಂದ ತಿಳಿದುಬರುವದೇನೆಂದರೆ : ಪರಮಾತ್ಮನು ಪ್ರತಿಯೊಂದು ಪ್ರಾಣಿಶರೀರದಲ್ಲಿಯೂ ಪ್ರವೇಶಿಸಿರುತ್ತಾನೆ. ಆದ್ದರಿಂದಲೇ ಅವು

ಚೇತನಪ್ರಾಣಿಗಳೆನಿಸಿವೆ. ವೇದಾಂತಸಿದ್ಧಾಂತದ ಪ್ರಕಾರ ಎಲ್ಲಾ ಸೃಷ್ಟಿಯೂ ಚೇತನವೇ ಹೊರತು ಅಚೇತನವೆಂಬುದು ಇಲ್ಲವೇ ಇಲ್ಲ. ಆದರೆ ವ್ಯವಹಾರದಲ್ಲಿ ನಾವು ಚೇನತಾಚೇತನವಿಭಾಗಗಳನ್ನು ಕಲ್ಪಿಸಿರುತ್ತೇವೆ. ಹೀಗೆ ಸಮಸ್ತವೂ ಚೇತನವೆಂದೇ ವೇದಾಂತಸಿದ್ಧಾಂತವು ತಿಳಿಸುತ್ತದೆ. ಕೆಲವು ವಸ್ತುಗಳಲ್ಲಿ ಚೇತನವು ಪ್ರಕಟವಾಗಿರುವದಿಲ್ಲ. ಆದರೆ ಅವು ಚೈತನ್ಯಕ್ಕಿಂತ ಎಂದೂ ಬೇರೆಯಾಗಿರುವದೇ ಇಲ್ಲ. ಉದಾಹರಣೆಗೆ ಮನೆಯಲ್ಲಿರುವ ಒಂದು ಬಾಗಿಲನ್ನು ನೋಡಿರಿ. ಅದು ಜಡವೆಂದು ನಮ್ಮ ತೀರ್ಮಾನವಾಗಿದೆ. ಅಥವಾ ನವರಾತ್ರಿಯಲ್ಲಿ ಸ್ಥಾಪಿಸಿರುವ ಮರದ ಬೊಂಬೆಗಳನ್ನು ನೋಡಿರಿ. ಅವು ಅಚೇತನಗಳೆಂದೇ ನಮ್ಮ ತೀರ್ಮಾನ ವಾಗಿದೆ. ಆದರೆ ಆ ಬಾಗಿಲಾಗಲಿ, ಗೊಂಬೆಗಳಾಗಲಿ ಮರದಿಂದ ಮಾಡಿದವು ಗಳಾಗಿದ್ದು ಆ ಮರವು ಕಡಿಯುವ ಮುಂಚೆ ಚೇತನವೇ ಆಗಿತ್ತಲ್ಲವೆ ? ಬೀಜದಿಂದ ಮರವು ಹುಟ್ಟಿಬೆಳೆದು ಬಾಳುತ್ತಿತ್ತಲ್ಲವೆ ? ಹೀಗೆ ಚಿಂತಿಸಿದಾಗ ಬೊಂಬೆಯು ಅಚೇತನವೆಂಬ ತೀರ್ಮಾನವೇ ತಪ್ಪಾಯಿತಲ್ಲವೆ ? ಆದ್ದರಿಂದ ಸೃಷ್ಟಿಯಲ್ಲಿರುವ ಸ್ಥಾವರಜಂಗಮವೆಲ್ಲವೂ ಚೇತನವೇ ಹೊರತು ಬೇರೆಯಲ್ಲ. ಚೇತನವೆಂದಾದ ಮೇಲೆ ಅದು ಜೀವತತ್ತ್ವವೇ ಆಗಿರಲೇಬೇಕು. ಆ ಜೀವವು ಪರಮಾತ್ಮನ ಅಂಶವೇ ಆಗಿದೆ. ಈ ರೀತಿಯಾಗಿ ಚಿಂತಿಸಿದಾಗ ಚೇತನನಾದ ಆತ್ಮನೇ ಜಗತ್ತಾಗಿ ತೋರಿ ಕೊಂಡು ಎಲ್ಲಾ ವಸ್ತುಗಳಲ್ಲಿಯೂ ಜೀವರೂಪದಿಂದ ಪ್ರವೇಶಿಸಿ ಉಪಾಧಿಗಳ ನಿಮಿತ್ತ ನಾಮರೂಪಭೇದಗಳನ್ನು ಹೊಂದಿರುತ್ತಾನೆ - ಎಂದು ಸಿದ್ಧವಾಗುತ್ತದೆ.

ಈ ಪರಮಾತ್ಮನು ಜೀವಭೇದಗಳನ್ನೆಲ್ಲ ಪ್ರವೇಶಿಸುವಾಗ ಹೀಗೆಂದು ಆಲೋಚಿಸಿದನು - ಎಂದು ಶ್ರುತಿಯು ತಿಳಿಸುತ್ತಿದೆ. ಏನೆಂದರೆ : ಈ ಸೃಷ್ಟಿಯು ನಾನಿಲ್ಲದೆ ಹೇಗೆ ತಾನೆ ಬಾಳೀತು ? ಆದ್ದರಿಂದ ಇದನ್ನು ಒಳಹೋಗುವೆನು - ಎಂದಾಲೋಚಿಸಿ ಸೃಷ್ಟಿಯಲ್ಲೆಲ್ಲಾ ಅತ್ಯುತ್ಕೃಷ್ಟವಾದ ಮನುಷ್ಯಶರೀರವನ್ನು ಆರಿಸಿ ಕೊಂಡು ಪ್ರವೇಶಕ್ಕಾಗಿ ಸಿದ್ಧನಾದನು. ಆದರೆ ಆ ವೇಳೆಗೆ ಈ ಹಿಂದೆ ತಿಳಿಸಿದಂತೆ ಮನುಷ್ಯಶರೀರದ ಇಂದ್ರಿಯದ್ವಾರಗಳಿಂದ ವಾಯು, ಆದಿತ್ಯ - ಮುಂತಾದ ದೇವತೆಗಳೆಲ್ಲ ಪ್ರವೇಶಿಸಿಬಿಟ್ಟಿದ್ದರಾದ್ದರಿಂದ ತಾನು ಬೇರೆ ಯಾರೂ ಪ್ರವೇಶಮಾಡದೆ ಇದ್ದ ನೆತ್ತಿಯ ನಡುವೆಯ ದ್ವಾರದಿಂದ ಪ್ರವೇಶಿಸಿದನು.

ಈಗ ಈ ಪ್ರವೇಶದ್ವಾರವನ್ನು ಶ್ರುತಿಯು ವಿವರಿಸುತ್ತದೆ. ಹೇಗೆಂದರೆ ಈ ದ್ವಾರಕ್ಕೆ 'ವಿದೃತಿ' ಎಂದು ಹೆಸರು. ಏಕೆಂದರೆ 'ವಿದಾರಿತತ್ವಾತ್ ವಿದೃತಿಃ' ಎಂಬ ವ್ಯುತ್ಪತ್ತಿಯಂತೆ ನೆತ್ತಿಯನ್ನು ಸೀಳಿಕೊಂಡು ಆತ್ಮನು ಒಳಹೊಕ್ಕಿರುತ್ತಾನೆ. ಈ ಬಾಗಿಲನ್ನೇ 'ಬೈತಲೆ' ಎಂದು ವ್ಯವಹಾರದಲ್ಲಿ ಕರೆಯುತ್ತಾರೆ. ಇನ್ನುಳಿದ ಕಿವಿ, ಕಣ್ಣು-

ಮುಂತಾದ ದ್ವಾರಗಳು ಮುಖ್ಯಮಾರ್ಗಗಳಲ್ಲ. ಅವು ಹೇಗೆ -ಅರಮನೆಯಲ್ಲಿ ಸೇವಕರೇ ಮುಂತಾದವರು ಓಡಾಡುವದಕ್ಕಾಗಿ ನಿರ್ಮಿಸಿರುವ ಚಿಕ್ಕಮಾರ್ಗಗಳಿರುವವೋ ಹಾಗೆ -ಎಂದು ತಿಳಿಯಬೇಕು. ಇನ್ನು ಈ ಮುಖ್ಯದ್ವಾರಕ್ಕೆ ನಾಂದನವೆಂದೂ ಹೆಸರಿದೆ. ''ನಂದನ' ಎಂಬಿದರ ವೈದಿಕಶಬ್ದಪ್ರಯೋಗವೇ 'ನಾಂದನ'ವೆಂದಾಗಿದೆ. ಈ ದ್ವಾರದಿಂದ ದೇಹತ್ಯಾಗಮಾಡಿದವನು ಪರಲೋಕಗಳಲ್ಲಿ ಆನಂದವನ್ನು ಅನುಭವಿಸುತ್ತಾನೆ. ಆದ್ದರಿಂದ ಬ್ರಹ್ಮೋಪಾಸಕರು ಈ ಮೂರ್ಧದ್ವಾರದಿಂದ ದೇಹವನ್ನು ತ್ಯಾಗಮಾಡಿ ಬ್ರಹ್ಮಲೋಕವನ್ನು ಹೊಂದಿ ಆನಂದವನ್ನು ಅನುಭವಿಸುತ್ತಾರೆ - ಎಂದಭಿಪ್ರಾಯ.

ಈಗ ದೇಹವನ್ನು ಪ್ರವೇಶಿಸಿದ ಆತ್ಮನ ಮೂರು ವಾಸಸ್ಥಾನಗಳನ್ನು ಶ್ರುತಿಯು ಹೀಗೆ ತಿಳಿಸುತ್ತಿದೆ. : ಎಚ್ಚರದ ಕಾಲದಲ್ಲಿ ಬಲಗಣ್ಣಿನಲ್ಲಿಯೂ ಕನಸನ್ನು ಕಾಣುತ್ತಿರುವಾಗ ಮನಸ್ಸಿನಲ್ಲಿಯೂ ಗಾಢನಿದ್ರೆಯ ಕಾಲದಲ್ಲಿ ಹೃದಯಾಕಾಶದಲ್ಲಿಯೂ ಈ ಆತ್ಮನು ಇದ್ದುಕೊಂಡಿರುವನು. ಇದೇ ರೀತಿಯಾಗಿ ಈ ಆತ್ಮನಿಗೆ (ಜೀವನಿಗೆ ) ಮುಂದೆ ಶ್ರುತಿಯಲ್ಲಿ ಹೇಳಿರುವಂತೆ ತಂದೆಯ ಶರೀರ, ತಾಯಿಯ ಗರ್ಭ, ಅನಂತರ ಹುಟ್ಟುವಾಗ ತನ್ನ ಶರೀರ - ಈ ರೀತಿಯಾಗಿ ಮೂರು ಸ್ಥಾನಗಳೂ ಆಗಬಹುದಾಗಿದೆ. ಹೀಗೆ ಆತ್ಮನಿಗೆ ಉಪಾಧಿನಿಮಿತ್ತವಾಗಿ ಸಂಸಾರವು ಸಂಭವಿಸಲಾಗಿ ತಾನು ಯಾರು ? ಎಂಬುದೆಲ್ಲವೂ ಮರೆತುಹೋಗಿ ಬಿಡುವದು. ಇದೇ ಸಂಸಾರವು. ಇಂಥ ಸಂಸಾರಿಯಾದ ಆತ್ಮನಿಗೆ ತಾನಲ್ಲದ ದೇಹೇಂದ್ರಿಯಾದಿಗಳಲ್ಲಿ ತಾನೆಂಬ ಭ್ರಾಂತಿಯುಂಟಾಗಿ ಇದೇ ತನ್ನ ನಿಜಸ್ವರೂಪವೆಂದೂ ತನ್ನ ಸರ್ವಸ್ವವೆಂದೂ ತಿಳಿದಿರುತ್ತಾನೆ. ಆದರೆ ಈ ತಿಳಿವಳಿಕೆಯು ತಪ್ಪು ತಿಳಿವಳಿಕೆಯೇ ಆಗಿರುತ್ತದೆ. ಇದನ್ನೇ ಅವಿದ್ಯೆ - ಎಂದು ಶಾಸ್ತ್ರದಲ್ಲಿ ಕರೆಯಲಾಗಿದೆ. ಇಂಥ ಜೀವಾತ್ಮನಿಗೆ ಪುಣ್ಯವಿಶೇಷದಿಂದ ಪರಮಕಾರುಣಿಕನೂ ಜ್ಞಾನಿಯೂ ಆದ ಸದ್ಗುರುವು ದೊರೆತಾಗ ಆ ಮಹಾತ್ಮನು ''ಅಯ್ಯ, ನೀನು ಸಂಸಾರಿಯಲ್ಲ; ದುಃಖಿಯಲ್ಲ; ಜನ್ಮಮರಣಗಳು ಉಳ್ಳವನಲ್ಲ, ನಿನ್ನ ಆತ್ಮನು ಅಜನು, ಅವ್ಯಯನು, ಅಸಂಗನು, ಅದ್ವಿತೀಯನು - ಎಂದು ಉಪದೇಶಮಾಡಲಾಗಿ ಆ ಬೋಧೆಯಿಂದ ಎಚ್ಚತ್ತವನಾಗಿ ತನ್ನ ನಿಜವಾದ ಅಸಂಸಾರಿಸ್ವರೂಪವನ್ನು ಅರಿತು ಕಂಡುಕೊಳ್ಳುತ್ತಾನೆ. ಸರ್ವವ್ಯಾಪಕವಾದ ಅಸಂಸಾರಿಯಾದ ಬ್ರಹ್ಮವೇ ತಾನು, ಎಲ್ಲೆಲ್ಲಿಯೂ ಇರುವವನು, ನಿತ್ಯಶುದ್ಧ ಬುದ್ಧಮುಕ್ತ ಸ್ವಭಾವನು - ಎಂದು ಆಚಾರ್ಯೋಪದೇಶ, ಹಾಗೂ ಸ್ವಾನುಭವದಿಂದ ಕಂಡುಕೊಳ್ಳುತ್ತಾನೆ. ಇದೇ ಜೀವನ್ಮುಕ್ತಿಯು.

ಈ ರೀತಿಯಾಗಿ ಯಾವನು ವಿಚಾರದಿಂದ ತನ್ನ ನಿಜಸ್ವರೂಪವನ್ನು

ಕಂಡುಕೊಳ್ಳುವನೋ ಅವನ ಅನುಭವವು ಹೀಗಿರುವದು. ಏನೆಂದರೆ ನಾಮ ರೂಪಾತ್ಮಕವಾದ ಈ ಪ್ರಪಂಚವೆಲ್ಲವೂ ಮತ್ತು ತಾನೂ ಸೇರಿದಂತೆ ಸಮಸ್ತವೂ ಬ್ರಹ್ಮವೇ - ಅದ್ವಿತೀಯವಾದ ಪರಮಾರ್ಥವೇ - ಎಂದು ಕಂಡುಕೊಳ್ಳುವನು. ಆಗ ಶ್ರುತಿಯು ಹೇಳುವಂತೆ ಸಾಧಕನು ಸಿದ್ಧನಾಗಿ ''ಇದಂದ್ರ'' ನೆನಿಸುವನು. ಇದರ ಅಭಿಪ್ರಾಯವೇನೆಂದರೆ : ಇದಂ - ಎಂಬುದಾಗಿ ದೃಶ್ಯವಾಗಿ ಕಾಣುತ್ತಿದ್ದ ನಾಮರೂಪ ಪ್ರಪಂಚವೆಲ್ಲವೂ ಬ್ರಹ್ಮವೇ, ಅದಕ್ಕಿಂತ ಎರಡನೆಯದು ಮತ್ತೊಂದಿಲ್ಲ - ಎಂಬ ಅದ್ವೈತಜ್ಞಾನದಲ್ಲಿ ನೆಲೆನಿಲ್ಲುವನು. ಇದೇ 'ಇದಂದ್ರ'ನಾಗುವಿಕೆಯು. ಇಂಥ ಪದವಿಯನ್ನು ಪರೋಕ್ಷವಾಗಿ ಹೇಳುವಿಕೆಯೇ 'ಇಂದ್ರ'ನೆಂಬುದಾಗಿದೆ. ದೇವತೆಗಳು ಪರೋಕ್ಷಪ್ರಿಯರೆಂದೇ ಶ್ರುತಿಯೂ ಹೇಳುತ್ತದೆ. ಆದ್ದರಿಂದ ತನ್ನ ಆತ್ಮನನ್ನು ಬ್ರಹ್ಮವಾಗಿ ಕಂಡುಕೊಂಡವನು ಇಂದ್ರನೆನಿಸಿ ಕೃತಕೃತ್ಯನಾಗುವನು.

ಈವರೆಗಿನ ವಿಚಾರಸರಣಿಯ ಪರಮತಾತ್ಪರ್ಯವೇನೆಂದರೆ : ಜಗತ್ತಿನ ಉತ್ಪತ್ತಿ , ಸ್ಥಿತಿ, ಪ್ರಲಯಗಳಿಗೆ ಬ್ರಹ್ಮವೇ ಕಾರಣವು ; ಅದೇ ಬ್ರಹ್ಮವು ಸರ್ವಜ್ಞವೂ ಸರ್ವಶಕ್ತವೂ ಆಗಿದ್ದು ಈ ಜಗತ್ತೆಲ್ಲವನ್ನೂ ವ್ಯಾಪಿಸಿಕೊಂಡಿದ್ದು ತನಗಿಂತ ಬೇರೊಂದು ವಸ್ತುವನ್ನಾಶ್ರಯಿಸದೆ ಸೃಷ್ಟಿಕಾಲಕ್ಕೆ ತಾನೇ ಪ್ರಪಂಚವಾಗಿ ತೋರಿಕೊಂಡು ಕೆಲವು ಕಾಲ ಹಾಗೆಯೇ ನಾಮರೂಪಾತ್ಮಕವಾದ ಜಗತ್ತಾಗಿಯೂ ಜೀವರುಗಳಾಗಿಯೂ ತೋರಿಕೊಂಡು ಪುನಃ ಪ್ರಲಯಕಾಲಕ್ಕೆ ಎಲ್ಲವನ್ನೂ ತನ್ನಲ್ಲಿಯೇ ಅಡಕಮಾಡಿಕೊಂಡು ತಾನೊಂದೇ ಆಗಿ ನೆಲೆನಿಂತಿದೆ. ಕಡೆಯಲ್ಲಿ ತಾನು ತನ್ನನ್ನೇ ಬ್ರಹ್ಮವೆಂದು ಅರಿತುಕೊಂಡಿತು. ಹೀಗೆ ವಿಚಾರಸರಣಿಯು ಮುಕ್ತಾಯ ವಾಗಿದೆ. ಇದು ಶ್ರುತ್ಯನುಗುಣವಾಗಿಯೂ ಇದೆ.

ಆದರೆ ಈ ಸಿದ್ಧಾಂತದ ಮೇಲೆ ಆಕ್ಷೇಪವೇನೆಂದರೆ : ಇಲ್ಲಿ ಈವರೆಗೆ ವರ್ಣಿಸಿರುವ ವಿಚಾರಗಳು ಬಹಳ ವಿಚಿತ್ರವಾಗಿವೆ. ಹೇಗೆಂದರೆ ನಿರ್ವಿಶೇಷವಾದ ಬ್ರಹ್ಮವು ಜಗತ್ತನ್ನು ಸೃಷ್ಟಿಮಾಡುವೆನೆಂದು ಸಂಕಲ್ಪಿಸಿತು. ಕರಣಗಳಿಲ್ಲದೆ ನೋಡಿತು. ಆಲೋಚಿಸಿತು. ಏನೊಂದು ವಸ್ತುವನ್ನೂ ಬಯಸದೆ ಪುರುಷನನ್ನು ಸೃಷ್ಟಿಮಾಡಿತು. ಅವನ ಶರೀರದಲ್ಲಿ ಪ್ರವೇಶಿಸಿತು. ಹಸಿವುಬಾಯಾರಿಕೆಗಳಿಂದ ಒಂದುಗೂಡಿಸಿತು. ಕಡೆಯಲ್ಲಿ ತಾನು ನೆತ್ತಿಯ ದ್ವಾರದಿಂದ ಶರೀರವನ್ನು ಪ್ರವೇಶಿಸಿತು - ಇತ್ಯಾದಿ ವಿಚಾರಗಳು ಬಹಳ ಅಸಂಬದ್ಧವಾಗಿ ಕಾಣುತ್ತಿವೆಯಲ್ಲ ? ಇದಕ್ಕೆಲ್ಲ ತಾತ್ಪರ್ಯವೇನಿರಬಹುದು ? ಎಂದು ಶಂಕೆಯುಂಟಾಗುತ್ತದೆ. ಹೀಗೆಂಬ ಆಕ್ಷೇಪವು ಬರಲಾಗಿ ಸಿದ್ಧಾಂತಿಗಳ ಉತ್ತರವೇನೆಂದರೆ : ಇವೆಲ್ಲವೂ ನಿಜವಲ್ಲ. ಆದರೆ ಪರಬ್ರಹ್ಮವೇ ತಾನು, ಪ್ರಪಂಚವೆಲ್ಲ ಪರಬ್ರಹ್ಮದ ಹುಸಿತೋರಿಕೆಗಳೇ, ಆದರೆ

ನಿರ್ವಿಶೇಷವಾದ ಬಹ್ಮವನ್ನು ತಿಳಿದುಕೊಳ್ಳುವದಕ್ಕೆ ಇವೆಲ್ಲ ಉಪಾಯಗಳು. ಈ ಉಪದೇಶಕ್ರಮವನ್ನು ಪ್ರಕ್ರಿಯೆ - ಎಂದು ಕರೆಯುತ್ತಾರೆ. ಹೀಗೆ ಶ್ರುತಿಯು ಸೃಷ್ಟಿಪ್ರಕ್ರಿಯೆಯನ್ನವಲಂಬಿಸಿ ಜಿಜ್ಞಾಸುವಿಗೆ ಬ್ರಹ್ಮವನ್ನು ತಿಳಿಸಿಕೊಟ್ಟು ತಾನೂ ವಿಶ್ರಾಂತವಾಗಿಬಿಡುತ್ತದೆ. ಹೀಗಲ್ಲದೆ ಬ್ರಹ್ಮವನ್ನು ಬೋಧಿಸಲು ಬೇರೆ ದಾರಿಯಿಲ್ಲ - ಎಂದು ಭಾಷ್ಯಾಕಾರರು ಸಮನ್ವಯಗೊಳಿಸಿರುತ್ತಾರೆ. ಇಂಥ ಉಪದೇಶಗಳನ್ನು ಅರ್ಥವಾದ (ಹೊಗಳಿಕೆ) ವೆಂದೂ ಕರೆಯುತ್ತಾರೆ. ಇದೊಂದು ವೇದಾಂತರಹಸ್ಯ ವೆಂದು ತಿಳಿಯಬೇಕು, ಇಲ್ಲವಾದರೆ ಅದ್ವಿತೀಯಬ್ರಹ್ಮವನ್ನು ಗುರುವು ಶಿಷ್ಯನಿಗೆ ತಿಳಿಸಲು ಸಾಧ್ಯವಾಗುವದಿಲ್ಲ. ಆದರೆ ಯಾವದೇ ಪ್ರಕ್ರಿಯೆಯನ್ನಾಶ್ರಯಿಸಿ ಬ್ರಹ್ಮತತ್ತ್ವವನ್ನು ಉಪದೇಶಿಸಿದರೂ ಆ ಪ್ರಕ್ರಿಯಾನಿಮಿತ್ತವಾದ ಯಾವ ಗುಣ ದೋಷಗಳೂ ಬ್ರಹ್ಮಕ್ಕೆ ಅಂಟಿರುವದಿಲ್ಲ. ಮನುಷ್ಯನ ನೆರಳು ಬಿಸಿಲಿಗೆ ಅನುಗುಣ ವಾಗಿ ಉದ್ದವಾಗಿಯೊ, ಗಿಡ್ಡವಾಗಿಯೊ - ಕಾಣಿಸಿಕೊಂಡರೆ ಮನುಷ್ಯನೇನೂ ಬದಲಾಗುವದಿಲ್ಲವಷ್ಟೆ! ಹಾಗೆಯೇ ಇದನ್ನು ತಿಳಿಯಬೇಕು.

ಈಗ ಆಕ್ಷೇಪಕನು ಹೇಳುವದೇನೆಂದರೆ : ಮೂವರು ಆತ್ಮರು ನಮ್ಮ ಅನುಭವದಲ್ಲಿ ಕಂಡುಬರುತ್ತಾರೆ. ಹೇಗೆಂದರೆ (೧) ಕರ್ತೃಭೋಕ್ತೃವಾಗಿ ಸಂಸಾರಿ ಯಾಗಿ ಇರುವ ಆತ್ಮನು ಒಬ್ಬನು (೨) ಸರ್ವಜ್ಞನೂ ಸರ್ವಶಕ್ತನೂ ಆಗಿದ್ದು ಪ್ರಪಂಚವನ್ನೆಲ್ಲ ಸೃಷ್ಟಿಸಿ ಅನುಶಾಸನಮಾಡುತ್ತಿರುವ ಈಶ್ವರನಾದ ಆತ್ಮನೊಬ್ಬನು (೩) ಇನ್ನು ಉಪನಿಷತ್ತುಗಳಲ್ಲಿ ಪ್ರತಿಪಾದ್ಯನಾದ ಅಸಂಸಾರಿಯೂ ನಿತ್ಯಶುದ್ಧಬುದ್ಧ ಮುಕ್ತಸ್ವಭಾವನೂ ಆದ ಆತ್ಮನೊಬ್ಬನು. ಹೀಗೆ ಮೂವರು ಆತ್ಮರು ಕಂಡು ಬರುತ್ತಾರೆ. ಹೀಗಿರುವಲ್ಲಿ ಆತ್ಮನು ಒಬ್ಬನೇ. ಅವನು ಅಸಂಸಾರಿಯು ; ನಿತ್ಯಶುದ್ಧ ಬುದ್ಧಮುಕ್ತಸ್ವಭಾವನು ಎಂದು ಹೇಗೆ ಸಿದ್ಧವಾದೀತು ? ಎಂಬಿದು ಪೂರ್ವ ಪಕ್ಷಿಯ ಅಭಿಪ್ರಾಯವಾಗಿದೆ.

ಇದಕ್ಕೆ ಉತ್ತರವೇನೆಂದರೆ : ನಿಜವಾಗಿ ಮೂವರು ಆತ್ಮರಿಲ್ಲ ; ಆತ್ಮನು ಒಬ್ಬನೇ. ಹೇಗೆಂದರೆ ಆತ್ಮನನ್ನು ಪ್ರತ್ಯಕ್ಷಾದಿಪ್ರಮಾಣಗಳಿಂದ ಅರಿಯಲಾಗುವ ದಿಲ್ಲ. ಜೀವಾತ್ಮನನ್ನೇ ಆಗಲಿ, ಹೇಗೆ ತಿಳಿಯಲು ಸಾಧ್ಯ ? ಎಂಬಿದನ್ನು ನೋಡೋಣ. ಜೀವನೆಂದರೆ ಕರ್ತೃಭೋಕ್ತೃವಾಗಿ ಶರೀರದಲ್ಲಿದ್ದುಕೊಂಡು 'ನಾನು' ಎಂಬ ಅಭಿಮಾನವುಳ್ಳವನು ಎಂದು ಹೇಳಬಹುದು ಆದರೆ ಶರೀರ, ಇಂದ್ರಿಯಾದಿ ಗಳ ಸಂಬಂಧದಿಂದ ಪರಮಾತ್ಮನೇ ಜೀವನೆನಿಸಿದ್ದಾನೆ. ಆಗ ಜೀವನು ಉಳಿದವುಗಳನ್ನು ತಿಳಿಯಬಹುದು. ತಾನೇ ತನ್ನನ್ನೇ ತಿಳಿಯುವದು ಹೇಗಾದೀತು ? ಒಬ್ಬನೇ ಕರ್ತೃ, ಕರ್ಮ, ಎರಡೂ ಆಗಲು ಸಾಧ್ಯವೆ ? 'ರಾಮನು ರಾವಣನನ್ನು

ಸಂಹಾರಮಾಡಿದನು' ಎಂಬಲ್ಲಿ ರಾಮ-ರಾವಣ ಎರಡೂ ಒಬ್ಬನೇ ಎಂದು ಹೇಳಲಾದೀತೆ ? ಆದ್ದರಿಂದ ಇರುವ ಆತ್ಮನೊಬ್ಬನನ್ನೇ ದೃಷ್ಟಿಭೇದದಿಂದ ಈಶ್ವರನೆಂದೂ ಜೀವನೆಂದೂ ವ್ಯವಹರಿಸಬಹುದೇ ಹೊರತು ಇಬ್ಬರು ಆತ್ಮರಿದ್ದಾರೆಂದು ತೀರ್ಮಾನಿಸಲಾಗುವದಿಲ್ಲ. ಹೀಗೆ ಆತ್ಮನು ಪ್ರತ್ಯಕ್ಷ ಅಥವಾ ಅನುಮಾನ ಪ್ರಮಾಣದಿಂದ ಎಂದಿಗೂ ಸಿದ್ಧನಾಗುವದಿಲ್ಲ. ಇನ್ನು ಪ್ರಮಾಣಗೋಚರನೇ ಅಲ್ಲದ ಅಪ್ರಮೇಯಾತ್ಮನನ್ನು ಮೂರು ವಿಭಾಗಮಾಡುವದಾದರೂ ಹೇಗಾದೀತು ? ಆದ್ದರಿಂದ ಆತ್ಮನು ಒಬ್ಬನೇ ಎಂಬಿದೇ ತೀರ್ಮಾನವಾಗಿರುತ್ತದೆ.

ಈಗ ಆಕ್ಷೇಪಕನು ಹೇಳುವದೇನೆಂದರೆ : ಹಾಗಾದರೆ ಶ್ರುತಿಯಲ್ಲಿ ' ಆ ಸೃಷ್ಟಿಕರ್ತನೂ ಸರ್ವಜ್ಞನೂ ಆದ ಆತ್ಮನನ್ನು ತನ್ನ ಆತ್ಮನೆಂದೇ ತಿಳಿಯಬೇಕು'- ಎಂದು ಶ್ರುತಿಯಲ್ಲಿ ಹೇಳಿದೆಯಲ್ಲ, ಇದು ಹೇಗೆ ಸರಿ ? ತಿಳಿಯುವವನು, ತಿಳಿಯಲ್ಪಡತಕ್ಕದ್ದು - ಎಂಬ ದ್ವೈತವಿಲ್ಲದೆ ತಿಳಿಯುವದಾದರೂ ಹೇಗಾದೀತು ? ಇದಕ್ಕೆ ಸಿದ್ಧಾಂತಿಯ ಉತ್ತರವು ಹೀಗಿದೆ : ಶ್ರುತಿಯಲ್ಲಿ ಆತ್ಮನನ್ನು 'ಶ್ರೋತಾ' (ಕೇಳುವವನು) ಎಂದಿರುವಂತೆಯೇ 'ಅಶ್ರೋತಾ' (ಕೇಳುವವನಲ್ಲದವನು) ಎಂದೂ ಹೇಳಿರುತ್ತದೆ. ಎರಡೂ ಒಬ್ಬನಲ್ಲಿಯೇ ಸಂಭವಿಸಲಾರದು. ಆದ್ದರಿಂದ ಆತ್ಮನೊಬ್ಬನೇ ಶರೀರೇಂದ್ರಿಯಾದಿ ಉಪಾಧಿಗಳ ಸಂಪರ್ಕದಿಂದ ಶ್ರೋತಾ - ಮಂತಾ - ಇತ್ಯಾದಿಯಾಗಿ ವ್ಯವಹರಿಸಲ್ಪಡುತ್ತಾನೆ. ಇವೆಲ್ಲವೂ ಕರ್ಮನಾಮಗಳು. ಹೇಗೆ ಬಡಗಿ, ಕುಂಬಾರ -ಇತ್ಯಾದಿಗಳು ಕರ್ಮನಾಮಗಳೋ ಅವು ಆಯಾ ವ್ಯಕ್ತಿಯ ನಿಜವಾದ ಹೆಸರುಗಳಲ್ಲವೋ ಅದರಂತೆಯೇ ಆತ್ಮನಿಗೂ ಶರೀರ ಇಂದ್ರಿಯಾದಿಗಳ ಸಂಬಂಧದಿಂದ ಶ್ರೋತಾ - ಇತ್ಯಾದಿ ಕರ್ಮನಾಮಗಳು ಬಂದಿವೆ. ಆದರೆ ಆತ್ಮನು ತಾನಿರುವಂತೆಯೇ ಶ್ರೋತೃವೂ ಅಲ್ಲ ದ್ರಷ್ಟೃವೂ ಅಲ್ಲ - ಎಂದು ವಿವೇಚಿಸಿ ತಿಳಿಯಬೇಕು. ಮೂರು ಆತ್ಮರುಗಳು ಇರುವದು ಅಸಂಭವವೇ ಆಗಿದೆ.

ಈಗ ಪೂರ್ವಪಕ್ಷಿಯು ಹೇಳುವದೇನೆಂದರೆ ಹಾಗಾದರೆ ಆತ್ಮನಿಗೆ ನಿತ್ಯ, ಅನಿತ್ಯ - ಎಂಬ ಎರಡು ದೃಷ್ಟಿಗಳಿವೆ ಎಂದಾಯಿತಲ್ಲವೆ ? ಇದಕ್ಕೆ ಸಿದ್ಧಾಂತಿಯ ಉತ್ತರವೇನೆಂದರೆ : ಹೌದು ; ಹೀಗಾದರೇ ಆತ್ಮನನ್ನು ''ದೃಷ್ಟಿಯ ದ್ರಷ್ಟೃ'' ಎಂದು ಕರೆಯಬಹುದಾಗುತ್ತದೆ. ಲೋಕದಲ್ಲಿ ಕೂಡ ಜನರು ''ಕಣ್ಣಿನ ದೃಷ್ಟಿಯು ಮರೆಯಾಯಿತು. ಅನಂತರ ಶಸ್ತ್ರಚಿಕಿತ್ಸೆಯಿಂದ ಮತ್ತೆ ದೃಷ್ಟಿಯು ಬಂದಿತು'' ಎನ್ನುತ್ತಾರೆ. ಇಲ್ಲಿ ನಿಜವೇನೆಂದರೆ ದೃಷ್ಟಿಯು ಹೋದದ್ದನ್ನೂ ಅನಂತರ ಬಂದದ್ದನ್ನೂ ಗುರುತಿಸಿ ಹೇಳುವವನು ಯಾರು ? ಅವನ ದೃಷ್ಟಿಗೇ ಲೋಪವಿತ್ತೆ ? ಎಂದರೆ ಇಲ್ಲ- ಎಂದೇ ಹೇಳಬೇಕಾಗುವದು. ಹೀಗೆ ದೃಷ್ಟಿಬಂದದ್ದನ್ನೂ ಹೋದದ್ದನ್ನೂ ಗುರುತಿಸಿದ

ಆತ್ಮನ ದೃಷ್ಟಿಯು ಹೋಗೀ ಬಂದೂ ಮಾಡುವ ಸ್ವಭಾವದ್ದಲ್ಲದ **ನಿತ್ಯದೃಷ್ಟಿಯೇ** ಆಗಿರುವದು. ಈ ದೃಷ್ಟಿಯ ತಿರುಳೇ ಆತ್ಮನಾಗಿದ್ದು ಅದು ಒಂದೇ ಆಗಿರುವಲ್ಲಿ ಮೂರು ಆತ್ಮರಿಗೆ ಅವಕಾಶವಾದರೂ ಎಲ್ಲಿದ್ದೀತು ? ಎಂಬಿದೇ ಸಿದ್ಧಾಂತಿಯ ಉತ್ತರವಾಗಿದೆ. ಇದನ್ನೇ ಸಾಕ್ಷಿದೃಷ್ಟಿ - ಎಂದೂ ಕರೆಯತ್ತಾರೆ.

ಈವರೆಗಿನ ವಿಚಾರಕ್ರಮದಿಂದ ಸಿದ್ಧವಾದ ತೀರ್ಮಾನವೇನೆಂದರೆ ಲೋಕದ ಜನರು ಹಾಗೂ ಪ್ರಮಾಣಪಟುಗಳೆನಿಸಿದ ತಾರ್ಕಿಕರು - ಕೇವಲ ಕಲ್ಪನಾರೂಪವಾದ ತರ್ಕದಿಂದ ಆತ್ಮಸ್ವರೂಪವನ್ನು ತೀರ್ಮಾನಿಸಲು ಪ್ರಯತ್ನಿಸಿ ನಿರಾಶರಾಗಿರುತ್ತಾರೆ. ಇದಕ್ಕೆ ಕಾರಣವೇನೆಂದರೆ ಆತ್ಮಸ್ವರೂಪನಿರ್ಧಾರಣೆ ಮಾಡಲು ಆಗಮ - ಸಂಪ್ರದಾಯಗಳ ಬೆಂಬಲವು ಬೇಕು. ಬರಿಯ ತರ್ಕವು ಎಂದಿಗೂ ಶಾಶ್ವತವಾಗಿ ನಿಲ್ಲಲಾರದು. ಮತ್ತು ತರ್ಕದಿಂದಲೇ ಸಿದ್ಧಾಂತವನ್ನು ಮಂಡಿಸಿದರೆ ಪ್ರತಿವಾದಿಯು ಮತ್ತೊಂದು ಪ್ರಬಲತರ್ಕವನ್ನು ಒಡ್ಡಿ ಹಿಂದಿನ ತರ್ಕವನ್ನು ಖಂಡಿಸುತ್ತಾನೆ. ಹೀಗೆ ನೆಲೆಯಿಲ್ಲದ ತರ್ಕದ ಪ್ರಭಾವದಿಂದ ವಸ್ತುನಿಷ್ಠವಾದ ಸಿದ್ಧಾಂತವು ಕೈಬಿಟ್ಟೇ ಹೋಗುವದು ಅನಿವಾರ್ಯವಾಗುತ್ತದೆ. ಆದ್ದರಿಂದ ಆಗಮ-ಸಂಪ್ರದಾಯಗಳ ತಳಹದಿಯಿಲ್ಲದ ತೀರ್ಮಾನಗಳು ಸ್ಥಿರವಾಗಿ ನಿಲ್ಲಲಾರವು ; ಅವು ತೀರ್ಮಾನಗಳೆನಿಸಿ ಕೊಳ್ಳಲೂ ತಕ್ಕವುಗಳಾಗುವದಿಲ್ಲ. ಈ ಪರಿಸ್ಥಿತಿಗೆ ಕಾರಣವೇನೆಂದರೆ ಆತ್ಮನ ವಿಷಯದಲ್ಲಿ ವಾದಿಗಳು ಭಾವಿಸಿರುವ ತಪ್ಪುತಿಳಿವಳಿಕೆಯೇ ಕಾರಣವಾಗಿರುತ್ತದೆ.

ಈಗ ಆಗಮಸಂಪ್ರದಾಯದ ಆಧಾರದಿಂದ ಆತ್ಮತತ್ತ್ವದ ನಿಜವನ್ನು ತಿಳಿಯೋಣ. ಆಗಮ- ಎಂದರೆ ಅನುಭವಿಯಾದ ಗುರುವು ಯೋಗ್ಯನಾದ ಶಿಷ್ಯನಿಗೆ ಮಾಡುವ ಉಪದೇಶಕ್ರಮವಾಗಿರುತ್ತದೆ. ಮತ್ತು ಈ ಉಪದೇಶವು ಅನುಭವಗಮ್ಯ ವಾಗಿರುತ್ತದೆ. ಅನುಭವವು ಸಾರ್ವತ್ರಿಕಾನುಭವವಾದ್ದರಿಂದ ಯಾವ ವಾದಿಯೂ ಅದನ್ನು ಖಂಡಿಸಲಾರನು. ಉದಾಹರಣೆಗೆ 'ಕಣ್ಣಿನಿಂದ ರೂಪವನ್ನು ನೋಡುತ್ತಾನೆ' ಎಂದರೆ ಅವನು ವೇದಾಂತಿಯಾಗಲಿ, ತಾರ್ಕಿಕನಾಗಲಿ, ನಾಸ್ತಿಕನಾಗಲಿ- ಎಲ್ಲರೂ ರೂಪವನ್ನು ನೋಡಲು ಕಣ್ಣೇ ಸಾಧನವಾಗಿರುತ್ತದೆ. ಆದ್ದರಿಂದ ಈ ತೀರ್ಮಾನ ವನ್ನು ಯಾರೂ ಬದಲಾಯಿಸುವಂತಿಲ್ಲ. ಇದನ್ನೇ ವೇದಾಂತದಲ್ಲಿ **ವಸ್ತುತಂತ್ರ ಜ್ಞಾನ**ವೆನ್ನುತ್ತಾರೆ. ಪರಬ್ರಹ್ಮವು ವಸ್ತುತಂತ್ರಜ್ಞಾನದಿಂದಲೇ ಲಭ್ಯವಾಗುತ್ತದೆ. ಆದರೆ ಆ ಬ್ರಹ್ಮವು ಹೇಗಿದೆಯೋ ಹಾಗೆಯೇ ತಿಳಿಯುವ ಪ್ರಯತ್ನವನ್ನೇ ಮಾಡಬೇಕು. ವೇದಾಂತಶಾಸ್ತ್ರವು ಈ ಸಂದರ್ಭದಲ್ಲಿ ಸಂಪೂರ್ಣವಾಗಿ ಸಹಾಯಕ್ಕೆ ಬರುತ್ತದೆ. ಆದ್ದರಿಂದ ವೇದಾಂತಶಾಸ್ತ್ರವು ತಿಳಿಸುವ ಮಾರ್ಗದಲ್ಲಿಯೇ ವಿಚಾರ ಮಾಡಿ ಬ್ರಹ್ಮವನ್ನು ಅರಿಯಬೇಕು. ಇಲ್ಲಿ ಸಂಶಯ ಅಥವಾ ಮಿಥ್ಯಾಜ್ಞಾನಗಳಿಗೆ

ಅವಕಾಶವೇ ಇರುವದಿಲ್ಲ. ಮತ್ತು ಒಮ್ಮೆ ತಿಳಿದ ಮೇಲೆ ಇನ್ನು ತಿಳಿಯಬೇಕಾದ ಜ್ಞೇಯವೇನೂ ಉಳಿದಿರುವದೇ ಇಲ್ಲ. ಗೀತೆಯಲ್ಲಿ ಭಗವಂತನೇ ಈ ಮಾತನ್ನು ಹೇಳಿರುತ್ತಾನೆ. ಆದ್ದರಿಂದ ಆತ್ಮತತ್ತ್ವವನ್ನು ಯಥಾರ್ಥವಾಗಿ ತಿಳಿಯಲಿಚ್ಛಿಸುವವನು ಕೇವಲ ಬುದ್ಧಿಗಮ್ಯವಾದ ತರ್ಕವನ್ನು ಬಿಟ್ಟು ಅನುಭವ ಹಾಗೂ ಶ್ರುತಿಸಮ್ಮತವಾದ ತರ್ಕವನ್ನೂ ಗುರೂಪದೇಶವನ್ನೂ ಆಶ್ರಯಿಸಿ ವಿಚಾರಮಾಡಬೇಕು. ಹೀಗೆಂದು ಶ್ರೀಶಂಕರಭಗವತ್ಪಾದರು ತಮ್ಮ ಐತರೇಯೋಪನಿಷದ್ಭಾಷ್ಯದಲ್ಲಿ ತಿಳಿಸಿರುತ್ತಾರೆ. ಅದರಂತೆ ಮುಂದಿನ ವಿಚಾರಗಳನ್ನು ಮಾಡೋಣ. ಇಲ್ಲಿಗೆ ಐತರೇಯೋಪನಿಷತ್ತಿನ ಒಂದನೆಯ ಅಧ್ಯಾಯವು ಮುಗಿದಿದೆ.

--------

## ಎರಡನೆಯ ಅಧ್ಯಾಯ

# ಜೀವನ ಬಂಧಮೋಕ್ಷಗಳು

ಈವರೆಗಿನ ವಿಚಾರಸರಣಿಯಲ್ಲಿ ಆತ್ಮನು ಒಬ್ಬನೇ. ಅವನೇ ಜಗತ್ತಿನ ಉತ್ಪತ್ತಿಸ್ಥಿತಿಲಯಗಳಿಗೆ ಕಾರಣನು. ಮತ್ತು ಜೀವಾತ್ಮರೂಪದಿಂದ ಎಲ್ಲಾ ಪ್ರಾಣಿಗಳಲ್ಲಿಯೂ ಒಳಹೊಕ್ಕಿರುತ್ತಾನೆ. ಅವುಗಳಲ್ಲಿ ಮಾನವನು ಶ್ರೇಷ್ಠನು. ಏಕೆಂದರೆ ಉಳಿದ ಜೀವರುಗಳಿಗಿಂತ ಇವನಲ್ಲಿ ವೈಶಿಷ್ಟ್ಯವಿದೆ. ಬುದ್ಧಿಜೀವಿಯಾದ ಇವನಿಗೆ ತಾನು ಯಾರು ? ತಾನು ಕಾಣುತ್ತಿರುವ ಪ್ರಪಂಚದ ತಿರುಳೇನು ? ಇತ್ಯಾದಿ ವಿಚಾರಮಾಡುವ ಶಕ್ತಿಯಿದೆ ಶಾಸ್ತ್ರ-ಗುರು-ಸಂಪ್ರದಾಯಗಳ ಬೆಂಬಲವಿದೆ. ಆದ್ದರಿಂದ ಪರಮಪುರುಷಾರ್ಥವಾದ ಮೋಕ್ಷವನ್ನು ಪಡೆಯಲು ಇವನಿಗೆ ಅವಕಾಶವಿದೆ- ಇತ್ಯಾದಿವಿಷಯಗಳನ್ನು ತಿಳಿಸಿದ್ದಾಗಿದೆ. ಆದರೆ ಮನುಷ್ಯರಾದ ಮಾತ್ರಕ್ಕೆ ಎಲ್ಲರೂ ಈ "ತಾನು ಯಾರು ?" ಎಂಬುದನ್ನು ವಿಚಾರಮಾಡಿ ತಿಳಿಯುವದಕ್ಕೆ ಪ್ರಯತ್ನಿಸುವದಿಲ್ಲ. ಏಕೆಂದರೆ ಅವರ ಇಂದ್ರಿಯಮನೋಬುದ್ಧಿಗಳು ಬಹಿರ್ಮುಖವಾಗಿರುತ್ತವೆ. ಆದ್ದರಿಂದ ಒಳಗಿರುವ ಆತ್ಮನನ್ನು ಕಂಡುಕೊಳ್ಳಲು ಒಳಮುಖರಾಗಬೇಕು. ಹಾಗೆ ಆಗಬೇಕಾದರೆ ಹೊರಗಿನ ಪ್ರಪಂಚದ ವ್ಯವಹಾರ ಗಳಲ್ಲಿ ವೈರಾಗ್ಯವುಂಟಾಗಬೇಕು. ಅದಕ್ಕೆ ಶಾಸ್ತ್ರದೃಷ್ಟಿಯು ಅವಶ್ಯವಾಗಿ ಬೇಕು. ಈ ಕಾರಣದಿಂದ ಶ್ರುತಿಯು ಈಗ ವೈರಾಗ್ಯವನ್ನು ಉಂಟುಮಾಡುವದಕ್ಕಾಗಿ ಮಾನವನ ಹುಟ್ಟಿನ ಮೂಲವನ್ನೂ ಅಲ್ಲಿರುವ ದೋಷಗಳನ್ನೂ ತಿಳಿಸಲು ಹೊರಟಿದೆ. ಆ ದೋಷಗಳ ಅನುಸಂಧಾನವೇ ವೈರಾಗ್ಯಹೇತುವಾಗುತ್ತದೆ. ಇದನ್ನೇ ಗೀತೆಯಲ್ಲಿ

**"ಜನ್ಮಮೃತ್ಯುಜರಾವ್ಯಾಧಿದುಃಖದೋಷಾನುದರ್ಶನಮ್"** ಎಂದು ಹೇಳಿದೆ. ಆದ್ದರಿಂದ ತತ್ತ್ವಜ್ಞಾನವುಂಟಾಗಲು ವೈರಾಗ್ಯವು ಅತ್ಯಗತ್ಯವಾಗಿರುವದರಿಂದ ಜೀವಾತ್ಮನ ಜನ್ಮಧಾರಣೆಯನ್ನು ಕುರಿತು ಈಗ ತಿಳಿಸಲಾಗುತ್ತದೆ. **ಅನಾತ್ಮವಾದ ದೇಹಾದಿಗಳಲ್ಲಿ ತಾನು ಎಂಬ ಭ್ರಮೆಯೇ ಬಂಧಕ್ಕೆ ಕಾರಣವು.** ಆದ್ದರಿಂದ ವ್ಯವಹಾರಪ್ರಪಂಚದಲ್ಲಿ ಜೀವನಿಗೆ ದೇಹಧಾರಣೆಯಾಗುವ ಕ್ರಮವನ್ನು ಈಗ ವಿವರಿಸಲಾಗುವದು.

**ಓಂ ॥ ಪುರುಷೇ ಹ ವಾ ..... ತದಸ್ಯ ಪ್ರಥಮಂ ಜನ್ಮ ॥ ೨-೧-೧ ॥**

ಇಲ್ಲಿ ಶ್ರುತಿಯು ಮನುಷ್ಯರಲ್ಲಿ ಉತ್ತಮರಾದವರ ಜನ್ಮವನ್ನೇ ಉದಾಹರಣೆಯಾಗಿ ಆರಿಸಿಕೊಂಡಿದೆ. ಏಕೆಂದರೆ ಮನುಷ್ಯರಾಗಿ ಹುಟ್ಟಿದವರೆಲ್ಲ ಆತ್ಮವಿಚಾರವನ್ನು ಮಾಡಿ ಪರಮಪುರುಷಾರ್ಥವನ್ನು ಪಡೆಯಲು ಪ್ರಯತ್ನಿಸುವ ದಿಲ್ಲ. ಭಗವದ್ಗೀತೆಯಲ್ಲಿರುವ ಈ ಶ್ಲೋಕವನ್ನು ನೋಡಿರಿ.

**ಮನುಷ್ಯಾಣಾಂ ಸಹಸ್ರೇಷು ಕಶ್ಚಿದ್ ಯತತಿ ಸಿದ್ಧಯೇ ।**
**ಯತತಾಮಪಿ ಸಿದ್ಧಾನಾಂ ಕಶ್ಚಿತ್ ಮಾಂ ವೇತ್ತಿ ತತ್ತ್ವತಃ ॥**

-ಗೀತಾ ೭-೩

ಸಾವಿರಾರು ಮಾನವರಲ್ಲಿ ಯಾವನೋ ಒಬ್ಬನು ತನ್ನ ಆತ್ಮನೇ ಪರಬ್ರಹ್ಮವು- ಎಂಬ ತತ್ತ್ವವನ್ನು ತಿಳಿಯಲು ಪ್ರಯತ್ನಿಸುತ್ತಾನೆ ಹಾಗೆ ಪ್ರಯತ್ನಿಸಿದವರಲ್ಲಿಯೂ ಯಾವನೋ ಒಬ್ಬನು ತನ್ನ ಸ್ವರೂಪವನ್ನು ನೇರಾಗಿ ತಿಳಿಯುತ್ತಾನೆ- ಹೀಗೆಂದು ಕೃಷ್ಣಭಗವಂತನು ತಿಳಿಸಿದ್ದಾನೆ. ಆದ್ದರಿಂದ ಆತ್ಮಜ್ಞಾನಕ್ಕಾಗಿ ಜನ್ಮವನ್ನೇ ಮೀಸಲಾಗಿಟ್ಟು ಪ್ರಯತ್ನಿಸುವವನು ದುರ್ಲಭನೇ ಸರಿ. ಇಂಥ ದೃಢವಾದ ಸಂಕಲ್ಪಮಾಡಿ ಮಾನವನ ಹುಟ್ಟಿನ ನಿಜವನ್ನು ತಿಳಿದು ವೈರಾಗ್ಯವನ್ನು ಹೊಂದುವದು ಆತ್ಮಜ್ಞಾನಕ್ಕೆ ಅಗತ್ಯವಾದ ಸಾಧನವಾಗಿರುತ್ತದೆ. ಈಗ ಶ್ರೀ ಶಂಕರಭಗವತ್ಪಾದರ ಭಾಷ್ಯಾನುಗುಣವಾಗಿ ಪುರುಷನ ಮೊದಲನೆಯ ಜನ್ಮವನ್ನು ವಿವರಿಸುವ ಮಂತ್ರಾರ್ಥವನ್ನು ವಿಚಾರಮಾಡೋಣ.

**ಪುರುಷೇ ಹ ವಾ ...... ತದಸ್ಯ ಪ್ರಥಮಂ ಜನ್ಮ ॥**

ಇಲ್ಲಿ ಪುರುಷಶಬ್ದವು ಮನುಷ್ಯಸಾಮಾನ್ಯನಿಗೆ ಅನ್ವಯಿಸುತ್ತದೆ. ಗಂಡಸು ಹೆಂಗಸು- ಎಂಬ ಭೇದವಿಲ್ಲ. ಏಕೆಂದರೆ ಜ್ಞಾನದಿಂದ ಮೋಕ್ಷವನ್ನು ಪಡೆದುಕೊಳ್ಳುವದಕ್ಕೆ ಎಲ್ಲರಿಗೂ ಅಧಿಕಾರವಿದೆ. ಆದರೂ ಉದಾಹರಣೆಯನ್ನು

ಕೊಡುವಾಗ ಒಬ್ಬ ಉತ್ತಮಪುರುಷನನ್ನು ಆಯ್ದು ಕೊಡಲಾಗುತ್ತದೆ. ಅದರಂತೆ ಸಂಸಾರಿಯಾದ ಒಬ್ಬ ಪುರುಷನು ಇಲ್ಲಿ ಉದಾಹರಣೆಯಾಗಿದ್ದಾನೆ. ಇವನು ತನ್ನ ಹಿಂದಿನ ಜನ್ಮಗಳಲ್ಲಿ ಯಜ್ಞದಾನತಪಸ್ಸುಗಳೆಂಬ ಶಾಸ್ತ್ರೀಯಕರ್ಮಗಳನ್ನು ಆಚರಿಸಿ ಆ ಪುಣ್ಯದ ಫಲವಾಗಿ ಚಂದ್ರ (ಪಿತೃ-) ಲೋಕವನ್ನು ಸೇರಿ ಭೋಗಗಳನ್ನು ಅನುಭವಿಸಿ ಪುಣ್ಯವು ಮುಗಿದಾಗ ಮತ್ತೆ ಭೂಲೋಕದಲ್ಲಿ ಜನ್ಮವೆತ್ತಲು ಕೆಳಗೆ ಇಳಿಯುತ್ತಾನೆ. ಹಾಗೆ ಸ್ವರ್ಗಲೋಕದಿಂದ ಇಳಿಯುವಾಗ ಮಳೆಯ ರೂಪದಲ್ಲಿ ಹೊರಟು ಭೂಮಿಯ ಮೇಲೆ ಬಿದ್ದು ಮನುಷ್ಯರು ತಿನ್ನುವಂಥ ಪೈರಾಗಿ (ಅಕ್ಕಿ ಮುಂತಾದವು) ಗಂಡಸಿಗೆ ಆಹಾರವಾಗಿ ಅವನ ಶರೀರವನ್ನು ಸೇರಿ ರೇತಸ್ಸು (ವೀರ್ಯ) ಆಗುತ್ತಾನೆ. ಇದು ಪುರುಷನ ಸಾರವಾಗಿರುತ್ತದೆ. ಇದನ್ನೇ ಆ ಪುರುಷನು ಸಮಯೋಚಿತವಾಗಿ ತನ್ನ ಧರ್ಮಪತ್ನಿಯು ರಜಸ್ವಲೆಯಾದ ಮೇಲೆ ಯೋಗ್ಯವಾದ ಕಾಲದಲ್ಲಿ ಆಕೆಯಲ್ಲಿರಿಸುತ್ತಾನೆ. ಹೀಗೆ ರೇತೋರೂಪದಲ್ಲಿ ಪುರುಷನಿಂದ ಹೊರಬರುವದೇ ಜೀವಾತ್ಮನ ಮೊದಲನೆಯ ಜನ್ಮವಾಗಿರುತ್ತದೆ.

ಹೀಗೆ ಧರ್ಮಪತ್ನಿಯಲ್ಲಿ ಸೇರಿದ ರೇತಸ್ಸು ಕ್ರಮೇಣ ಸ್ತ್ರೀಯಲ್ಲಿ ಗರ್ಭವಾಗಿ ಬೆಳೆಯುತ್ತದೆ. ಅದು ಶರೀರದ ಒಂದು ಅಂಗವು ಹೇಗೋ ಹಾಗೆ ಆತ್ಮಭೂತ ವಾಗುವದರಿಂದ ಅದು ಸ್ತ್ರೀಯನ್ನು ಹಿಂಸಿಸುವದಿಲ್ಲ. ಅದು ಕ್ರಮೇಣ ಸ್ತ್ರೀ ಶರೀರದಲ್ಲಿಯೇ ನವಮಾಸಗಳ ಕಾಲ ಬೆಳೆಯುತ್ತದೆ. ಮುಂದೆ ಹತ್ತನೆಯ ತಿಂಗಳಲ್ಲಿ ಗರ್ಭದಿಂದ ಹೊರಬರುತ್ತದೆ. ಇದು ಆ ಪುರುಷನ ಎರಡನೆಯ ಜನ್ಮವು. ವೇದದಲ್ಲಿ ಇದನ್ನೇ **ಆತ್ಮಾ ವೈ ಪುತ್ರ ನಾಮಾಸಿ** ಎಂದು ತಿಳಿಸಿದೆ. ತಾನೇ ಪುತ್ರನಾಗಿ ಜನಿಸಿದ್ದಾನೆ- ಎಂದಭಿಪ್ರಾಯ. ಈಗಲೂ ಬಹಳಮಟ್ಟಿಗೆ ಹಿರಿಯಮಗನು ತಂದೆಯ ರೂಪ, ಆಕಾರ, ಸ್ವಭಾವ, ನಡೆವಳಿಕೆಗಳುಳ್ಳವನಾಗಿರುವದು ಕಂಡುಬರುತ್ತದೆ. ಆದ್ದರಿಂದ ತಂದೆಗೆ ಮಗನಾಗಿ ಹುಟ್ಟುವದು ಈ ಪುರುಷನ ಎರಡನೆಯ ಜನ್ಮವು- ಎಂದು ಶ್ರುತಿಯ ಅಭಿಪ್ರಾಯ.

ಇನ್ನು ಈ ಮಗನು ತಂದೆಯಂತೆಯೇ ನಡೆನುಡಿಗಳಲ್ಲಿಯೂ ಶಾಸ್ತ್ರೀಯ ಕರ್ಮಾನುಷ್ಠಾನ, ವಿದ್ಯಾಭ್ಯಾಸ, ಜೀವನಕ್ರಮದಲ್ಲಿಯೂ ಬಹುಮಟ್ಟಿಗೆ ತಂದೆಯನ್ನೇ ಅನುಕರಿಸುತ್ತಿದ್ದು ತಾನೂ ಗೃಹಸ್ಥನಾಗಿ ತನ್ನ ಧರ್ಮಪತ್ನಿಯಲ್ಲಿ ಮಗನನ್ನು ಪಡೆಯುತ್ತಾನೆ. ಇದೇ ಮೂರನೆಯ ಜನ್ಮವೆನಿಸುತ್ತದೆ. ಈ ರೀತಿಯಲ್ಲಿ ಮೂರು ಮೂರಾಗಿ ಲೆಕ್ಕಮಾಡುತ್ತಾ ಹೋದಂತೆಲ್ಲ ಜೀವಾತ್ಮನ ಸಂಸಾರಿತ್ವವು ಆದ್ಯಂತಗಳಿಲ್ಲದೆ ನಿರಂತರವಾಗಿ ಮುಂದುವರೆಯುವದು. ಇದನ್ನೇ ಶ್ರೀ ಶಂಕರಭಗವತ್ಪಾದರು ತಮ್ಮ ಭಜಗೋವಿಂದ ಸ್ತೋತ್ರದಲ್ಲಿಯೂ ''ಪುನರಪಿ

ಜನನಂ ಪುನರಪಿ ಮರಣಂ ಪುನರಪಿ ಜನನೀಜಠರೇ ಶಯನಮ್'' ಎಂದು ಉಲ್ಲೇಖಿಸಿದ್ದಾರೆ. ಈ ಪದ್ಯವು ಐತರೇಯೋಪನಿಷತ್ತಿನ ಅಭಿಪ್ರಾಯವನ್ನೇ ತಿಳಿಸುತ್ತಲಿದೆ.

ನಮ್ಮ ಭರತಖಂಡವು ಪುರುಷಪ್ರಧಾನವಾದ ಸಮಾಜಧರ್ಮವುಳ್ಳ ದೇಶವಾಗಿದೆ ಆದ್ದರಿಂದಲೇ ಹೆಣ್ಣುಮಕ್ಕಳು ಮದುವೆಯಾದ ಅನಂತರ ಗಂಡನ ಮನೆಗೆ ಸೇರಿ ಅದೇ ಗೋತ್ರ-ವಂಶದವರಾಗಿಬಿಡುತ್ತಾರೆ. ಮತ್ತು ಗಂಡನ ಆಸ್ತಿಯೆಲ್ಲವೂ ಹೆಂಡತಿಗೇ ಸೇರಿಬಿಡುತ್ತದೆ. ಮುಂದೆ ಮಕ್ಕಳು ಅದರ ವಾರಸುದಾರರಾಗುತ್ತಾರೆ. ಈ ಧರ್ಮವು ಬೇರೆ ದೇಶಗಳಲ್ಲಿ ಕಂಡುಬರುವದಿಲ್ಲ. ಆದರೆ ಇದಕ್ಕೆ ಆಧಾರವಾಗಿಯೇ ಈ ಉಪನಿಷತ್ತಿನ ಕೆಲವು ಮಂತ್ರಗಳು ತಳಹದಿಯನ್ನು ನೀಡಿರುತ್ತವೆ ಆದ್ದರಿಂದ ವಿವೇಕ, ವೈರಾಗ್ಯ, ತ್ಯಾಗ, ಪರಲೋಕ, ಸ್ವರ್ಗ, ಮೋಕ್ಷ- ಇತ್ಯಾದಿ ವಿಚಾರಗಳು ನಮ್ಮ ಭರತಖಂಡದಲ್ಲಿ ಈಗಲೂ ಜನಜೀವನದಲ್ಲಿ ಹಾಸುಹೊಕ್ಕಾಗಿ ಬೆಳೆದುಕೊಂಡುಬಂದಿವೆ. ಲೌಕಿಕಕಾರಣಗಳಿಂದ ಧರ್ಮದ ಚೌಕಟ್ಟು ಸ್ವಲ್ಪ ಸಡಿಲವಾಗಿದ್ದರೂ ಯಾರಿಗೂ ಈ ಧರ್ಮವು ಬೇಡವೆನಿಸಿರುವದಿಲ್ಲ. ಬೇರೆ ಮತಧರ್ಮದವರು ಏನೇ ಪ್ರಚಾರಮಾಡಿದರೂ ಈ ಸನಾತನಾರ್ಯಧರ್ಮವು ಅನುಭವಾನುಸಾರಿಯಾದ ಆತ್ಮಜ್ಞಾನದ ಭದ್ರವಾದ ತಳಹದಿಯ ಮೇಲೆ ನಿಂತಿರುವದರಿಂದ ಇದನ್ನು ಅಲ್ಲಾಡಿಸುವದು ಸಾಧ್ಯವಿಲ್ಲವೆಂದೇ ಕಂಡುಬರುತ್ತದೆ. ಇದಕ್ಕೆ ಮೂಲಾಧಾರವೇ ಅಧ್ಯಾತ್ಮವಿದ್ಯೆಯಾಗಿದೆ. ಈ ವಿದ್ಯೆಯು ಜನ್ಮಾಂತರ-ಲೋಕಾಂತರ-ವಿಚಾರಗಳನ್ನೂ ಒಳಗೊಂಡು ಅನುಭವದ ತಳಹದಿಯುಳ್ಳದ್ದಾಗಿರುವದರಿಂದ ಮತಧರ್ಮಗಳಿಗಿಂತ ಮಿಗಿಲಾದದ್ದಾಗಿದೆ. ಮತ್ತು ಈ ಸಂಸ್ಕೃತಿಯಲ್ಲಿ ನಿಜವಾದ ಶಾಂತಿಸುಖಗಳೂ ನೆಲೆಸಿರುತ್ತವೆ. ಆದ್ದರಿಂದ ಈಗ ಪ್ರಸ್ತಾಪಮಾಡಿರುವ ಜೀವಾತ್ಮನ ಜನ್ಮತ್ರಯಗಳ ವಿಚಾರವು ವೈರಾಗ್ಯಸಂಪಾದನೆಗಾಗಿ ವಿನಿಯೋಗವಾಗಿದೆ. ವೈರಾಗ್ಯದ ತಳಹದಿಯಿಲ್ಲದೆ ಅಧ್ಯಾತ್ಮವಿದ್ಯೆಯು ಎಟುಕುವಂತೆಯೇ ಇಲ್ಲ. ಆದ್ದರಿಂದಲೇ ಜೀವಾತ್ಮನ ಜನ್ಮತ್ರಯಗಳ ವರ್ಣನೆಯು ಪ್ರಸ್ತುತವಾಗಿದ್ದು ಮುಂದೆ ಈ ಜನ್ಮತ್ರಯಗಳ ಗುಣದೋಷಚಿಂತನೆಯಿಂದ ವಿವೇಕ-ವೈರಾಗ್ಯಗಳು ಲಭಿಸಿ ಸಾಧಕನು ಅಮೃತಸ್ವರೂಪವಾದ ಮೋಕ್ಷವನ್ನು ಪಡೆಯಲೆಂದು ಇಲ್ಲಿ ತಿಳಿಸಿರುತ್ತದೆ. ಈಗ ಮುಕ್ತಿಯೆಂಬ ನಿಃಶ್ರೇಯಸಧರ್ಮವನ್ನು ವಿಚಾರಮಾಡಿ ಕೃತಾರ್ಥರಾಗಲು ಪ್ರಯತ್ನಿಸೋಣ. ಮುಂದಿನ ಮಂತ್ರವು ಹೀಗಿದೆ:-

**ಓಂ ॥ ತದುಕ್ತಮೃಷಿಣಾ - ಗರ್ಭೇ ನು ಸನ್ .... ಉವಾಚ ॥ ೨-೧-೫ ॥**

ಈ ಮಂತ್ರದ ಅಭಿಪ್ರಾಯವು ಹೀಗಿದೆ : ''ಇದು ಋಷಿಯಿಂದ ಉಕ್ತವಾಗಿದೆ.

'ಗರ್ಭದಲ್ಲಿ ಇದ್ದುಕೊಂಡೇ ಅಲ್ಲವೆ, ಈ ದೇವತೆಗಳ ಜನ್ಮಗಳೆಲ್ಲವನ್ನೂ ತಿಳಿದುಕೊಂಡೆನು ? ನೂರು ಕಬ್ಬಿಣದ ಪುರಗಳು ನನ್ನನ್ನು ರಕ್ಷಿಸಿಕೊಂಡಿದ್ದವು. ಈಗ ಗಿಡುಗನಂತೆ ವೇಗದಿಂದ ಹೊರಕ್ಕೆ ಬಂದಿರುತ್ತೇನೆ' ಹೀಗೆಂದು ಗರ್ಭದಲ್ಲಿಯೇ ಇದ್ದುಕೊಂಡೇ **ವಾಮದೇವನು** ಹೇಳಿದನು''.

ಭಾಷ್ಯಕಾರರು ಈ ಮಂತ್ರಾರ್ಥವನ್ನು ಹೀಗೆ ವಿವರಿಸಿರುತ್ತಾರೆ. ''ವಾಮದೇವನಿಗೆ ಹಲವು ಜನ್ಮಾಂತರಗಳಲ್ಲಿ ಮಾಡಿದ ಸಾಧನೆಯ ಬಲದಿಂದ ಭಾವನೆಯು ಪರಿಪಕ್ವವಾದ್ದರಿಂದ ಈ ಅಗ್ನಿ ಮುಂತಾದ ದೇವತೆಗಳ ಜನ್ಮಗಳನ್ನೆಲ್ಲ ನಾನು ತಿಳಿದುಕೊಂಡೆನು. ಕಬ್ಬಿಣದಿಂದ ಮಾಡಿದವುಗಳಂತೆ ಅಭೇದ್ಯವಾಗಿದ್ದ ಬಹುಪುರ (ಶರೀರ)ಗಳು ನನ್ನನ್ನು ರಕ್ಷಿಸಿಕೊಂಡಿದ್ದವು. ಸಂಸಾರದ ಬಲೆಯಿಂದ ತಪ್ಪಿಸಿಕೊಂಡು ಹೊರಕ್ಕೆ ಬರದಂತೆ ಅನೇಕ ಪುರ (ಶರೀರ)ಗಳು ನನ್ನನ್ನು ಸುತ್ತುವರೆದಿದ್ದವು. ಆದರೆ ಆತ್ಮಜ್ಞಾನದ ಬಲದಿಂದ ನಾನು ಶರೀರದಿಂದ ಹೊರ ಬಂದಿರುತ್ತೇನೆ. ಆಹಾ- ಈ ವಾಮದೇವನು ಗರ್ಭದಲ್ಲಿಯೇ ಮಲಗಿಕೊಂಡೇ ಹೀಗೆ ನುಡಿದನು'' ಎಂದು ತಿಳಿಸಿದ್ದಾರೆ.

---------

### ಮೂರನೆಯ ಅಧ್ಯಾಯ

## ಆತ್ಮಸ್ವರೂಪದ ನಿಶ್ಚಯ

ಈಗ ಐತರೇಯೋಪನಿಷತ್ತಿನ ಮೂರನೆಯ ಅಧ್ಯಾಯದ ವಿಷಯಗಳನ್ನು ಕುರಿತು ವಿಚಾರಮಾಡೋಣ. ಭಾಷ್ಯಕಾರರು ಈ ವಿಷಯಕ್ಕೆ ಅವತರಣಿಕೆಯನ್ನು ಹೀಗೆ ತಿಳಿಸಿದ್ದಾರೆ : ಶ್ರುತಿಯಲ್ಲಿ ಬ್ರಹ್ಮವಿದ್ಯೆಯೆಂಬ ಸಾಧನದಿಂದ ಸರ್ವಾತ್ಮಭಾವ ಪ್ರಾಪ್ತಿಯನ್ನು ವಾಮದೇವಾದಿ ಆಚಾರ್ಯರ ಪರಂಪರೆಯಿಂದ ಪಡೆದುಕೊಂಡ ಜ್ಞಾನಿಗಳು ಕೃತಾರ್ಥರಾದ ವಿಷಯವನ್ನು ಮನಗಂಡ ಕೆಲವು ಮುಮುಕ್ಷುಗಳು ತಾವೂ ಬ್ರಹ್ಮಜ್ಞಾನಿಗಳಾಗುವ ಸದುದ್ದೇಶದಿಂದ ಒಮ್ಮೆ ಒಟ್ಟಾಗಿ ಸೇರಿ ವಿಚಾರ ಮಾಡಲು ಉಪಕ್ರಮಿಸಿದರು- ಎಂದು ಬರೆದಿದ್ದಾರೆ. ಈ ವಿಚಾರಸರಣಿಯನ್ನೇ ಈಗ ತಿಳಿಸಲಾಗುವದು. ಉಪನಿಷತ್ತಿನಲ್ಲಿ ಹೀಗಿದೆ :-

**''ಕೋಽಯಮಾತ್ಮೇತಿ ವಯಮುಪಾಸ್ಮಹೇ .... ವಿಜಾನಾತಿ'' ॥ ೩-೧-೧ ॥**

ವಾಮದೇವಾದಿಋಷಿಗಳು ವಿಚಾರಮಾಡಿ ತಿಳಿದುಕೊಂಡು ಅಮೃತರಾದರು- ಎಂಬಲ್ಲಿ ಅವರು ತಿಳಿದುಕೊಂಡ ಆತ್ಮನು ಯಾರಿರಬಹುದು ? ಎಂಬಿದೇ

ಸಂಶಯವು. ಏಕೆಂದರೆ ಶ್ರುತಿಯಲ್ಲಿರುವಂತೆ (೧) ಕಾಲಿನ ಮೂಲಕ ಪ್ರವೇಶಿಸಿದನು. (೨) ಬೈತಲೆಯನ್ನು ಭೇದಿಸಿಕೊಂಡು ಪ್ರವೇಶಿಸಿದನು - ಎಂಬ ಎರಡು ವಾಕ್ಯಗಳಿವೆ. ಹಾಗಾದರೆ ಶರೀರವನ್ನು ಇಬ್ಬರು ಆತ್ಮರು ಪ್ರವೇಶಿಸಿದ್ದಾರೆಯೆ? ಅವರಲ್ಲಿ ನಿಜವಾದ ಆತ್ಮನು ಯಾರು ? ಹೀಗೆ ಸಂಶಯವುಂಟಾಗುತ್ತದೆ. ಇದನ್ನು ವಿಚಾರಮಾಡಬೇಕೆಂದು ಜಿಜ್ಞಾಸುಗಳಾದ ಋಷಿಗಳು ಸಭೆ ಸೇರಿ ಚರ್ಚಿಸಲಾರಂಭಿಸಿದರು.

ಈ ವಿಚಾರಸರಣಿಯಲ್ಲಿ ಆತ್ಮನನ್ನು ಗುರುತಿಸಲು ಒಂದು ಚಿಂತನೆಯನ್ನು ಕೈಗೊಂಡರು. ಹೇಗೆಂದರೆ ಒಬ್ಬ ಮನುಷ್ಯನ ಶರೀರದಲ್ಲಿ ಕಣ್ಣು, ಕಿವಿ, ಮೂಗು, ನಾಲಗೆ, ಚರ್ಮ- ಈ ಐದು ಇಂದ್ರಿಯಗಳಿವೆ. ಇವು ಕ್ರಮವಾಗಿ ರೂಪ, ಶಬ್ದ, ಗಂಧ, ರುಚಿ, ಸ್ಪರ್ಶ- ಇವುಗಳನ್ನು ಗ್ರಹಿಸುತ್ತವೆ. ಆದರೆ ಯಾವದೊಂದು ಇಂದ್ರಿಯವೂ ತನ್ನ ವಿಷಯವನ್ನು ಬಿಟ್ಟು ಮತ್ತೊಂದನ್ನು ಗ್ರಹಿಸಲಾರದು. ಆದ್ದರಿಂದ ಇವು ಯಾವವೂ ಆತ್ಮನೆನಿಸಲಾರವು. ಐದು ವಿಷಯಗಳನ್ನೂ ಗ್ರಹಿಸಬಲ್ಲದ್ದು ಯಾವದೋ ಅದೇ ಆತ್ಮನಾಗಿರಬೇಕು- ಎಂದು ಊಹಿಸಿದರು. ಅದರಂತೆ ಮನಸ್ಸೆಂಬುದೇ ಆತ್ಮನಾಗಿರಬಹುದೆಂತ ಕಂಡುಬಂದಿತು. ಆದರೆ ಅದೂ ಬದಲಾಗುತ್ತಿದೆಯಾದ್ದರಿಂದ ಆತ್ಮನಾಗಲಾರದೆಂತ ಸಂಶಯವುಂಟಾಯಿತು. ಅದು ಉಳಿದ ಕರಣಗಳಿಗಿಂತ ಹೆಚ್ಚು ವ್ಯಾಪಕವಾದದ್ದಾದರೂ ವಿಕಾರಿಯಾದ್ದರಿಂದ ಆತ್ಮನಾಗಲಾರದೆಂತ ತಿಳಿಯಿತು. ಇನ್ನು ಆತ್ಮನೆಂಬುದು ಯಾವದಿದ್ದೀತು ? ಎಂದು ಮತ್ತೆ ವಿಚಾರಮಾಡಿದಾಗ ಕಣ್ಣಿಗೆ ಕಣ್ಣಾಗಿ ಕಿವಿಗೆ ಕಿವಿಯಾಗಿ - ಎಲ್ಲಾ ಇಂದ್ರಿಯಗಳಿಗೂ ಚೈತನ್ಯವನ್ನು ನೀಡಿ ತಾನು ಸ್ವತಂತ್ರವಾಗಿಯೇ ಇರುವ ವಸ್ತುವು ಯಾವದಿರಬಹುದು ? ಎಂದು ವಿಚಾರಮಾಡಲಾಗಿ ಅದೇ ಆತ್ಮನಾಗಿರಬೇಕು- ಎಂದು ಋಷಿಗಳು ನಿಶ್ಚಯಿಸಿದರು. ಆ ಶುದ್ಧಚೈತನ್ಯವೇ ಸರ್ವರ ಆತ್ಮನೆಂದೂ ನಿಶ್ಚಯಿಸಿದರು. ಮತ್ತು ಚಕ್ಷುರಾದಿಕರಣಗಳು ಮಾರ್ಪಡುವಂತೆ ಅದು ಮಾರ್ಪಡುವದಿಲ್ಲವೆಂದೂ ತಿಳಿದರು. ಮತ್ತು ಉಳಿದ ಕರಣಗಳು ಮಾರ್ಪಡುವದನ್ನು ನೋಡುವ ಆ ತತ್ತ್ವವು ಬ್ರಹ್ಮವೇ ಆಗಿರಬೇಕೆಂದು ತೀರ್ಮಾನಿಸಿದರು.

ಈಗ ಕರಣಗಳಿಗೂ ಅವುಗಳಿಗೆ ವಿಷಯಗಳಾದ ಶಬ್ದಾದಿಗಳಿಗೂ ಹಿನ್ನೆಲೆಯಾಗಿ ತಾನೊಂದೇ ಎನಿಸಿರುವದು ಮನಸ್ಸಾಗಿದೆ. ಒಂದು ರೀತಿಯಲ್ಲಿ ನೋಡಿದರೆ ಮನಸ್ಸನ್ನೇ ಆಯಾ ಶಬ್ದಾದಿವಿಷಯಗಳನ್ನು ಅರಿಯುವಾಗ ಶ್ರೋತ್ರ, ಚಕ್ಷುಸ್ಸು- ಮುಂತಾಗಿ ವ್ಯವಹರಿಸುವೆವು. ಆದ್ದರಿಂದ ಅಂತಃಕರಣವಾದ ಮನಸ್ಸನ್ನೂ ದಾಟಿ ಅದಕ್ಕೂ ಹಿನ್ನೆಲೆಯಾಗಿರುವ ಚೈತನ್ಯವೇ ಆತ್ಮನಾಗಿರಬೇಕೆಂದೂ

ನಿಶ್ಚಯಿಸಿದರು. ಈ ಸಂಶೋಧನೆಯ ಫಲವಾಗಿಯೇ ಆ ಋಷಿಗಳು ಆತ್ಮಜ್ಞಾನಿಗಳೆನಿಸಿದರು. ಪ್ರಾಕೃತರಾದ ನಮಗೂ ಈ ಆತ್ಮನೇ ಒಳಗಿದ್ದರೂ ನಾವು ಇಂದ್ರಿಯಮನೋಬುದ್ಧಿಗಳನ್ನೇ ಬಳಸುತ್ತಾ ಅವುಗಳನ್ನು ದಾಟಿಹೋಗಲಾರದೆ ಇರುವದರಿಂದ ನಮ್ಮ ಅಂತರಾತ್ಮನೇ ಆದ ಬ್ರಹ್ಮವು ನಮಗೆ ದುರ್ಲಭವಾಗಿದೆ. ಆದರೆ ವಿಚಾರದಿಂದ ಈ ತತ್ತ್ವವನ್ನು ಯಾರು ಬೇಕಾದರೂ ಮನಗಾಣ ಬಹುದಾಗಿದೆ.

ಈಗ ಅಂತಃಕರಣವನ್ನು ಇನ್ನಷ್ಟು ವಿಚಾರಮಾಡೋಣ. ಇದು ಕೂಡ ನಿಜವಾದ ಆತ್ಮನಲ್ಲ. ಏಕೆಂದರೆ ಇದು ವಿಕಾರಿಯಾಗಿದೆ. ಇದರ ಬೇರೆ ಬೇರೆಯ ವೃತ್ತಿಗಳನ್ನು ವಿಚಾರಮಾಡಿದರೆ ಈ ತೀರ್ಮಾನವು ಹೊರಡುತ್ತದೆ. ಆದ್ದರಿಂದ ಶ್ರುತಿಯಲ್ಲಿ ಅಂತಃಕರಣದ ಕೆಲವು ವೃತ್ತಿಗಳನ್ನು ಉದಾಹರಿಸಿದ್ದಾರೆ ಅವುಗಳನ್ನು ಪರಿಶೀಲಿಸೋಣ. ಹೊರಗಿನ ವಿಷಯಗಳನ್ನು ಅರಿಯುವದಕ್ಕೆ ಈ ವೃತ್ತಿಗಳು ಉಪಯುಕ್ತವಾಗಿವೆಯಾದರೂ ಇವು ವಿಕಾರಗಳನ್ನು ಹೊಂದುತ್ತಿರುವದರಿಂದ ಬ್ರಹ್ಮವಾಗಲಾರವು. ಇನ್ನು ಬ್ರಹ್ಮವನ್ನೇ ಗುರುತಿಸಬೇಕಾದರೆ ಇವುಗಳಿಗೂ ಆತ್ಮವಾಗಿರುವ ಚೈತನ್ಯವನ್ನೇ ಕಂಡುಕೊಳ್ಳಬೇಕು. ಹಾಗೆ ಕಂಡುಕೊಳ್ಳಲು ಈ ವೃತ್ತಿಗಳು ದ್ವಾರಗಳಾಗಿವೆ. ಕೆಲವು ವೃತ್ತಿಗಳನ್ನು ವಿಚಾರಮಾಡೋಣ. ಶ್ರುತಿಯೇ ಇವುಗಳ ವಿವರವನ್ನು ತಿಳಿಸುತ್ತಿದೆಯಾದ್ದರಿಂದ ಶ್ರುತ್ಯನುಗುಣವಾಗಿಯೇ ಅನುಸಂಧಾನ ಮಾಡೋಣ.

## ಅಂತಃಕರಣವೃತ್ತಿಗಳು

**....ಸಂಜ್ಞಾನಮಾಜ್ಞಾನಂ ವಿಜ್ಞಾನಂ ಪ್ರಜ್ಞಾನಂ ..... ನಾಮಧೇಯಾನಿ ಭವನ್ತಿ** ॥ ೩-೧-೨ ॥

ಈ ಮಂತ್ರದಲ್ಲಿರುವ ಅಂತಃಕರಣದ ನಾಮಗಳನ್ನು ಶ್ರುತಿಯು ವಿವರಿಸುತ್ತಿದೆ ಹೇಗೆಂದರೆ : ಸಂಜ್ಞಾನವೆಂಬುದು ಒಂದು ವೃತ್ತಿಯು. ಇದು ಚೇತನವೃತ್ತಿಯಾಗಿದೆ. ಎಚ್ಚರವೆಂದೂ ಇದನ್ನು ಕರೆಯಬಹುದಾಗಿದೆ ಆದರೆ ಇದು ನಿಜವಾದ ಆತ್ಮನಿಗೆ ಉಪಾಧಿಯಾಗಿದೆ. ಇದರ ಮೂಲಕ ಉಪಹಿತನಾದ ಪ್ರತ್ಯಗಾತ್ಮನನ್ನು ಗುರುತಿಸ ಬಹುದಾಗಿದೆ. ಇದೇ ರೀತಿಯಾಗಿ ಎಲ್ಲಾ ಅಂತಃಕರಣವೃತ್ತಿಗಳನ್ನೂ ಪರಬ್ರಹ್ಮ ವಿಜ್ಞಾನಕ್ಕೆ ಮೆಟ್ಟಿಲುಗಳಾಗಿ ಬಳಸಿಕೊಳ್ಳಬಹದು. ಇನ್ನು ಈ ಕರಣಗಳಾದ ಎಲ್ಲಾ ಇಂದ್ರಿಯವೃತ್ತಿಗಳ ಒಟ್ಟು ಗುಂಪನ್ನೇ ಪ್ರಾಣನೆಂದು ಕರೆಯುತ್ತಾರೆ. ಈ ಪ್ರಾಣನಿಗೂ ಪ್ರಾಣನಾಗಿರುವದೇ ಪರಬ್ರಹ್ಮವು. ಅದು ನಿರುಪಾಧಿಕವಾಗಿದೆ. ಅದರಲ್ಲಿ

ನೆಲೆನಿಲ್ಲುವದೇ ಮುಕ್ತಿಯು. ಪ್ರಕೃತ ಈ ಮನೋವೃತ್ತಿಗಳ ಬೇರೆ ಬೇರೆಯ ರೂಪಗಳನ್ನು ನೋಡೋಣ. **ಆಜ್ಞಾನ**ವೆಂದರೆ ಅಪ್ಪಣೆಮಾಡುವದು, ತಾನು ಯಜಮಾನನೆನಿಸಿಕೊಂಡು ಸೇವಕರಿಗೆ ಅಪ್ಪಣೆ ಮಾಡುವ ಮನೋಭಾವವು. ಅನಂತರ **ವಿಜ್ಞಾನ**ವೆಂದರೆ ಚಿತ್ರ, ಶಿಲ್ಪ, ಗಾನ, ನೃತ್ಯ, ಗ್ರಂಥರಚನೆ, ವಾಕ್ಯಾರ್ಥ-ಇತ್ಯಾದಿ ರೂಪವಾದ ವಿಶೇಷತಿಳಿವಳಿಕೆಗಳು. ಇವೆಲ್ಲವೂ ಅಂತಃಕರಣದ ರೂಪಾಂತರಗಳೇ ಆಗಿವೆ. ವಿಕಾರವುಳ್ಳವಾದ್ದರಿಂದ ಆತ್ಮನಲ್ಲವಾದರೂ ಅವನ ಹಿನ್ನೆಲೆಯುಳ್ಳವಾಗಿವೆ. ಇನ್ನು **ಪ್ರಜ್ಞಾನ**ವೆಂದರೆ ಅಸಾಧಾರಣವಾದ ಬುದ್ಧಿಶಕ್ತಿ ಅಥವಾ ಪಾಂಡಿತ್ಯ. ಅನಂತರ **ಮೇಧಾ** ಎಂದರೆ ಧಾರಣಾಶಕ್ತಿ. **ದೃಷ್ಟಿ** ಎಂದರೆ ಇಂದ್ರಿಯಗಳಿಂದ ವಿಷಯಗಳನ್ನು ಅರಿಯುವಿಕೆ. **ಧೃತಿ** ಎಂದರೆ ತಿಳಿದದ್ದನ್ನು ಮರೆಯದೆ ಕಾಪಾಡಿಕೊಳ್ಳುವದು ಮತ್ತು ಸೋಲುವ ಇಂದ್ರಿಯಗಳನ್ನು ಎಬ್ಬಿಸಿ ಉತ್ತಮಸ್ಥಿತಿಯಲ್ಲಿರಿಸಿಕೊಳ್ಳುವದು. ಇನ್ನು **ಮತಿ** ಎಂದರೆ ಮನನವು. ಕೇಳಿದ್ದನ್ನು ಮೆಲುಕುಹಾಕಿ ಗಟ್ಟಿಮಾಡಿಕೊಳ್ಳುವದು. **ಮನೀಷಾ** ಎಂದರೆ ಆ ತೀರ್ಮಾನಗಳಲ್ಲಿ ನೆಲೆನಿಲ್ಲುವ ಸ್ವಾತಂತ್ರ್ಯವು. ಹಾಗೆಯೇ **ಜೂತಿ** ಎಂದರೆ ಮನಸ್ಸಿಗೆ ತಾಕುವ ಆತಂಕಗಳು ಮತ್ತು ದುಃಖಗಳು. **ಸ್ಮೃತಿ** ಎಂದರೆ ನೆನಪುಮಾಡಿಕೊಳ್ಳುವದು. **ಸಂಕಲ್ಪ**ವೆಂದರೆ ಮನಸ್ಸಿನಲ್ಲಿ ವಿಷಯಗಳನ್ನು ಮೂಡಿಸಿಕೊಳ್ಳುವದು. **ಕ್ರತು** ಎಂದರೆ ನಿಶ್ಚಯಾತ್ಮಕವಾದ ಅಂತಃಕರಣವೃತ್ತಿಯು. **ಅಸು**- ಎಂದರೆ ಪ್ರಾಣಾಪಾನಾದಿ ರೂಪದಿಂದ ಜೀವನಕ್ಕಾಗಿ ಉಸಿರಾಡುವಿಕೆ. **ಕಾಮ** ಎಂದರೆ ಎಟುಕದೆ ಇರುವ ದೂರದಲ್ಲಿರುವ ವಸ್ತುವನ್ನು ಕುರಿತು ಚಿಂತಿಸುವದು. **ವಶ**- ಎಂದರೆ ಬಯಸಿನೊಡನೆ ಬೆರೆಯುವದೇ ಮುಂತಾದ ಬಯಕೆಗಳು. ಹೀಗೆ ಅಂತಃಕರಣದ ನಾನಾವೃತ್ತಿಗಳು ಕೇವಲ ಅರಿವಿನ ರೂಪವಾಗಿರುವ ಬ್ರಹ್ಮಕ್ಕೆ ಉಪಾಧಿಗಳಾಗಿದ್ದು ಆ ಬ್ರಹ್ಮವನ್ನು ಅರಿಯಲು ಪ್ರಯೋಜನಕಾರಿಗಳಾಗಿವೆ- ಎಂದರೆ ಇವೆಲ್ಲವನ್ನೂ ಬ್ರಹ್ಮವನ್ನರಿಯಲು ಜಾಣನಾದವನು ಬಳಸಿಕೊಳ್ಳಬಹುದಾಗಿದೆ. ಇದೊಂದು ಅಪೂರ್ವವಾದ ಅಧ್ಯಾತ್ಮಸಾಧನವೇ ಆಗಿರುವದು.

## ಎಲ್ಲರಲ್ಲಿಯೂ ಇರುವ ಪ್ರಜ್ಞಾನವೇ ಬ್ರಹ್ಮವು

**ಏಷ ಬ್ರಹ್ಮ ಏಷ ಇಂದ್ರ .... ಪ್ರಜ್ಞಾನಂ ಬ್ರಹ್ಮ ॥ ೩-೧-೩ ॥**

ಹೀಗೆ ಅಂತಃಕರಣಸಾಕ್ಷಿಯೂ ಅಂತಃಕರಣದ ಎಲ್ಲಾ ರೂಪವಾದ ವೃತ್ತಿಗಳ ತಿರುಳೂ ಆದ, ಆದರೆ ಆ ಯಾವ ಧರ್ಮಗಳಿಗೂ ಅಂಟಿಕೊಳ್ಳದೆ ಎಲ್ಲಾ ವೃತ್ತಿಗಳನ್ನೂ ಸೂರ್ಯನಂತೆ ಬೆಳಗುವ ನಿತ್ಯಚೈತನ್ಯಸ್ವರೂಪವೂ ನಿತ್ಯಶುದ್ಧಬುದ್ಧ

ಮುಕ್ತವೂ ನಿರುಪಾಧಿಕವೂ ವಿಕಾರರಹಿತವೂ ಅಜರಾಮರವೂ ಸ್ವಯಂಜ್ಯೋತಿಯೂ ಸರ್ವರ ಆತ್ಮನೂ ಆದ ವಸ್ತುವೇ ಪರಬ್ರಹ್ಮವು. ಉಳಿದ ದೃಶ್ಯಗಳೆಲ್ಲವೂ ಅದರ ನೆರಳೇ ಆಗಿವೆ. ಪಂಚಮಹಾಭೂತಗಳೂ ಜರಾಯುಜಾದಿಚತುರ್ವಿಧಭೂತ ವರ್ಗವೂ ಸೃಷ್ಟಿಯಲ್ಲಿರುವ ಚತುರ್ವಿಧಭೂತಗ್ರಾಮವೂ ಈ ಪರಬ್ರಹ್ಮವೇ ಆಗಿದೆ. ಒಟ್ಟಿನಲ್ಲಿ ಚೇತನಾಚೇತನರೂಪವಾಗಿ ಜಗತ್ತು ಕಂಡುಬಂದರೂ ಅಚೇತನ ವೆಂಬುದು ಸಹ ಚೇತನದಲ್ಲಿಯೇ ಅಡಕವಾಗಿದ್ದು ಎಲ್ಲವೂ ಪ್ರಜ್ಞಾನವೆಂಬ ಪರಬ್ರಹ್ಮವನ್ನೇ ಆಶ್ರಯಿಸಿಕೊಂಡು ಇವೆ. ಈ ವಿಶಾಲದೃಷ್ಟಿಯಿಂದ ನೋಡಿದಾಗ ಪ್ರಜ್ಞಾನರೂಪವಾದ ಬ್ರಹ್ಮಕ್ಕಿಂತ ಬೇರೊಂದು ಇಲ್ಲವಾಗಿದ್ದು ಪ್ರಜ್ಞಾನವೇ ಬ್ರಹ್ಮವೆಂದು ಸಿದ್ಧಾಂತಮಾಡಲ್ಪಟ್ಟಿದೆ.

ಹೀಗೆ ವಾಮದೇವನೆಂಬ ಋಷಿಯು ತನ್ನ ಅಂತರಂಗದಲ್ಲಿ ಸಾಧನಬಲದಿಂದ ಕಂಡುಕೊಂಡ ಪ್ರಜ್ಞಾನರೂಪವಾದ ತತ್ತ್ವದಿಂದ ತನ್ನ ನಿಜಸ್ವರೂಪದಲ್ಲಿ ನಿಂತು ಅಮೃತನಾದನು. ಇದೇ ರೀತಿಯಾಗಿ ಯಾವ ಸಾಧಕನಾದರೂ ಈ ತತ್ತ್ವವಿಚಾರ ಸರಣಿಯಿಂದ ಹಾಗೂ ಸಾಧನಗಳಿಂದ ಕೂಡಿದವನಾಗಿ ಬ್ರಹ್ಮಾನುಸಂಧಾನವನ್ನು ಕೈಗೊಂಡಲ್ಲಿ ವಾಮದೇವನಂತೆಯೇ ಬ್ರಹ್ಮಜ್ಞಾನಿಯಾಗಿ ಅಮೃತನಾಗುವನು-ಎಂದು ಶ್ರುತಿಯು ತಿಳಿಸುತ್ತಿದೆ. ಇಂಥ ಆತ್ಮವಿಚಾರವನ್ನು ದೇಶಕಾಲಗಳ ಕಟ್ಟಿಲ್ಲದೆ ಹಾಗೂ ಜಾತಿಮತಧರ್ಮಲಿಂಗಾದಿಗಳ ಭೇದವಿಲ್ಲದೆ ಯಾರು ಬೇಕಾದರೂ ವಿಚಾರ ಮಾಡಿ ಅನುಭವವನ್ನು ಪಡೆದುಕೊಂಡು ಬದುಕಿರುವಾಗಲೇ ಮುಕ್ತರಾಗ ಬಹುದಾಗಿದೆ. ಹೀಗೆಂದು ಪ್ರಾಚೀನಕಾಲದ ಭಾರತದ ತತ್ತ್ವಶೋಧಕರಾದ ಮಹರ್ಷಿಗಳು ತಿಳಿಸಿಕೊಟ್ಟಿರುತ್ತಾರೆ. ಇಂಥ ಬ್ರಹ್ಮನಿಷ್ಠರಿಗೆ ನಮ್ಮ ಸಹಸ್ರ ವಂದನೆಗಳು.

|| ಹರಿಃ ಓಂ ತತ್ಸತ್ ||

---------

## ಗ್ರಂಥಕರ್ತರ ಪರಿಚಯ

ಶ್ರೀ ಕೃಷ್ಣಯಜುರ್ವೇದ ಸಲಕ್ಷಣ ಘನಾಂತ ಸ್ಮಾರ್ತಪ್ರಯೋಗ ಉಭಯ ವಿದ್ವಾನ್ ದಿ|| ಶೃಂಗೇರಿ ಶ್ರೀಕಂಠಘನಪಾಠಿಗಳವರು ಮತ್ತು ಕಮಲಮ್ಮನವರ ಸೀಮಂತ ಪುತ್ರರಾದ **ಶ್ರೀ ಹೆಚ್. ಎಸ್. ಲಕ್ಷ್ಮೀನರಸಿಂಹಮೂರ್ತಿಗಳು** ತಾ|| 2-6-1928ರಲ್ಲಿ ಜನಿಸಿದರು. ಒಂಭತ್ತನೆಯ ವಯಸ್ಸಿನಲ್ಲಿಯೇ ಬ್ರಹ್ಮಚರ್ಯಾಶ್ರಮವನ್ನು ಸ್ವೀಕರಿಸಿ ತಂದೆಯವರಿಂದಲೇ ವೇದಾಧ್ಯಯನ ಕಾಲೋಚಿತಭಾಗಗಳನ್ನು ಅಭ್ಯಾಸ ಮಾಡಿದರು. 14ನೆಯ ವಯಸ್ಸಿನಲ್ಲಿ ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದರು. ಅದೇ ಸಂದರ್ಭದಲ್ಲಿ ಪಿತೃವಿಯೋಗವಾದ್ದರಿಂದ ಆಂಗ್ಲ ವಿದ್ಯಾಭ್ಯಾಸದಿಂದ ನಿವೃತ್ತರಾಗಿ ಬೇಲೂರಿನಲ್ಲಿ ಸಂಸ್ಕೃತಪಾಠಶಾಲೆಗೆ ಸೇರಿ ನಾಲ್ಕು ವರ್ಷಗಳ ಕಾಲ ಸಂಸ್ಕೃತಾಭ್ಯಾಸಮಾಡಿ ಚಂಪೂನಾಟಕ (ಸಾಹಿತ್ಯ) ಪರೀಕ್ಷೆಯಲ್ಲಿ ಪ್ರಥಮದರ್ಜೆಯಲ್ಲಿ ಉತ್ತೀರ್ಣರಾದರು. ಅನಂತರ 1947ರಲ್ಲಿ ಹೊಳೆನರಸೀಪುರಕ್ಕೆ ಬಂದು ಅಧ್ಯಾತ್ಮವಿದ್ಯಾನಿಲಯಕ್ಕೆ ಸೇರಿ ಐದು ವರ್ಷಗಳ ಕಾಲ ಶಾಂಕರವೇದಾಂತಾಧ್ಯಯನವನ್ನು **ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿ**ಗಳವರ ಸನ್ನಿಧಿಯಲ್ಲಿ ಅಭ್ಯಾಸಮಾಡಿ 1952ರಲ್ಲಿ **ಅಧ್ಯಾತ್ಮವಿದ್ಯಾಪ್ರವೀಣ** ಎಂಬ ಪ್ರಶಸ್ತಿಯನ್ನು ಪಡೆದರು. ಅನಂತರ ಅಧ್ಯಾತ್ಮಪ್ರಕಾಶಕಾರ್ಯಾಲಯದಲ್ಲಿಯೇ ಪಂಡಿತರಾಗಿ ನೇಮಿಸಲ್ಪಟ್ಟು ಪಾಠಪ್ರವಚನಗಳು ಉಪನ್ಯಾಸಗಳು ಹಾಗೂ ಸಂಸ್ಥೆಯ ಆಡಳಿತವಿಭಾಗದಲ್ಲಿಯೂ ಸೇವೆಯನ್ನು ಸಲ್ಲಿಸುತ್ತಾ ಈಗಲೂ ಸಂಸ್ಥೆಯಲ್ಲಿ ಸೇವಾತತ್ಪರರಾಗಿದ್ದಾರೆ.

ಅಧ್ಯಾತ್ಮಪ್ರಕಾಶಕಾರ್ಯಾಲಯದ ಸಂಸ್ಥಾಪಕರಾದ ಪೂಜ್ಯ **ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು** 1975ರಲ್ಲಿ ಬ್ರಹ್ಮೀಭೂತರಾದ ಮೇಲೆ ಇವರು **'ಅಧ್ಯಾತ್ಮಪ್ರಕಾಶ'** ಮಾಸಪತ್ರಿಕೆಯ ಸಂಪಾದಕರೂ, ಲೇಖಕರೂ ಆಗಿ ಸೇವೆ ಸಲ್ಲಿಸುತ್ತಿದ್ದಾರೆ. ಜೊತೆಗೆ ಅಧ್ಯಾತ್ಮಗ್ರಂಥಗಳ ಬರಹಗಾರರೂ ಪ್ರಕಾಶಕರೂ ಆಗಿ ಸೇವೆಸಲ್ಲಿಸುತ್ತಾ ಪ್ರಧಾನಕಾರ್ಯಾಲಯದಲ್ಲಿಯೇ ಕಳೆದ 48 ವರ್ಷಗಳಿಂದಲೂ ಸೇವಾನಿರತರಾಗಿದ್ದಾರೆ. ಶ್ರೀಶ್ರೀಗಳವರ ಕಾಲಾನಂತರ ಈವರೆಗೆ 30 ಅಧ್ಯಾತ್ಮ ಗ್ರಂಥಗಳನ್ನು ಹೊರತಂದಿದ್ದಾರೆ. ನಾಲ್ಕು ಪರ್ಯಾಯಗಳಲ್ಲಿ ಬ್ರಹ್ಮಸೂತ್ರಶಾಂಕರ ಭಾಷ್ಯದ ಮೇಲೆ 120 ಪ್ರವಚನಗಳನ್ನು ನೀಡಿದ್ದಾರೆ. ಇವು 108 ಕ್ಯಾಸೆಟ್‌ಗಳಲ್ಲಿ ಅಡಕವಾಗಿದ್ದು ಜನಪ್ರಿಯವಾಗಿವೆ. ಹೀಗೆ ಪೂಜ್ಯ ಶ್ರೀಶ್ರೀಗಳವರ ಶಿಷ್ಯರಲ್ಲಿ ಗಣ್ಯರಾಗಿದ್ದು ಈಗಲೂ ತಮ್ಮ ಅಮೋಘಸೇವೆಯಿಂದ ಸಂಸ್ಥೆಯ ಅಭಿವೃದ್ಧಿಗೆ ಕಾರಣರಾಗಿದ್ದಾರೆ - ಎಂದು ತಿಳಿಸಲು ಸಂತೋಷಪಡುತ್ತೇವೆ.

**18-12-2000**

---------

# ಐತರೇಯೋಪನ್ಯಾಸಮಂಜರಿ

ಪ್ರಕಾಶಕರು:
ಅಧ್ಯಾತ್ಮಪ್ರಕಾಶಕಾರ್ಯಾಲಯ,
ಹೊಳೆನರಸೀಪುರ - ೫೭೩೨೧೧